ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ

### ಎಂ.ಎ. (ಪ್ರಥಮ)

# ಉತ್ತರ ಭಾರತದ ಇತಿಹಾಸ ಕಾನಿಷ್ಕ, ಸಮುದ್ರಗುಪ್ತ, ಅಶೋಕ, ಹರ್ಷವರ್ಧನ, ಕಾಳಿದಾಸ, ಆರ್ಯಭಟ, ವರಾಹ ಮೀಹಿರ

ಕೋರ್ಸ್ – 2 ಬ್ಲಾಕ್ – 5

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ

**ಕೋರ್ಸ್ - 2**

*ಬ್ಲಾಕ್*

**5**

ಘಟಕ - 51 1
ಪರ್ಶಿಯನ್ ಮತ್ತು ಗ್ರೀಕರ ದಾಳಿ - ಭಾರತೀಯ ಸಮಾಜದ ಮೇಲೆ ಅವುಗಳ ಪ್ರಭಾವ

ಘಟಕ - 52 15
ಕುಶಾನರ ಆಳ್ವಿಕೆ - ಕಾನಿಷ್ಕ - ಕಲೆ ಮತ್ತು ಸಂಸ್ಕೃತಿಗಳಿಗೆ ಕುಶಾನರ ಕೊಡುಗೆಗಳು

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

*ವಿಷಯ ಸಂಯೋಜಕರು*

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

## ಪಠ್ಯಕ್ರಮ ನಿರೂಪಕರು

1. *ಘಟಕ ಬರೆದವರು* — **ಘಟಕಗಳು 51 ರಿಂದ 52**

**ಡಾ. ಎಂ. ಸುಶೀಲ ಅರಸ್**
ಪ್ರವಾಚಕರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು.

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ೨೦೧೩

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಎಂ.ಎ
# ಇತಿಹಾಸ
# ಬ್ಲಾಕ್ - 5

ಬ್ಲಾಕ್ 5 ರಲ್ಲಿ ಘಟಕ 51 ಮತ್ತು 52 ಎಂಬ ಎರಡು ಘಟಕಗಳಿವೆ. ಘಟಕ 51 ರಲ್ಲಿ ನೀವು ಪರ್ಶಿಯನ್ ಮತ್ತು ಗ್ರೀಕರ ದಾಳಿ - ಭಾರತೀಯ ಸಮಾಜದ ಮೇಲೆ ಅವುಗಳ ಪ್ರಭಾವ ಎಂಬ ವಿಷಯವನ್ನು ಅಧ್ಯಯನ ಮಾಡುವಿರಿ. ಈ ಘಟಕದಲ್ಲಿ ಪರ್ಶಿಯನ್ ಮತ್ತು ಗ್ರೀಕರು ಭಾರತಕ್ಕೆ ದಾಳಿ ಮಾಡಿದ ರೀತಿ, ಅಲೆಗ್ಸಾಂಡರನು ಭಾರತದ ಅನೇಕ ಭಾಗಗಳನ್ನು ಗೆದ್ದುಕೊಂಡು ತನ್ನ ಆಡಳಿತವನ್ನು ಸ್ಥಾಪಿಸಿದ್ದು, ಇವುಗಳನ್ನು ಅರ್ಥ ಮಾಡಿಕೊಳ್ಳುವಿರಿ. ವಿದೇಶಿಯರು ಭಾರತದಲ್ಲಿ ಬಂದು ನೆಲಸಿದ ಮೇಲೆ, ಅವರು ಭಾರತೀಯ ಧರ್ಮ, ಸಂಪ್ರದಾಯ, ರೀತಿ ನೀತಿಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಭಾರತೀಯರೇ ಆದರು. ಪರಿಣಾಮವಾಗಿ ಭಾರತೀಯ ಮತ್ತು ಪಾಶ್ಚಿಮಾತ್ಯ ದೇಶಗಳ ನಡುವೆ ಉತ್ತಮ ಸಂಪರ್ಕವೇರ್ಪಟ್ಟಿದ್ದಲ್ಲದೆ, ಎರಡೂ ದೇಶಗಳ ಸಂಸ್ಕೃತಿಗಳು ಸಮ್ಮಿಲನಗೊಂಡು ಭಾರತೀಯ ಸಂಸ್ಕೃತಿ ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಂಡು ಗಡಿಯಾಚೆಗೂ ತಲುಪುವಂತಾಯಿತು. ಭಾಷೆ, ತತ್ವಶಾಸ್ತ್ರ, ವಿಜ್ಞಾನ, ವೈದ್ಯಶಾಸ್ತ್ರ, ಸಾಹಿತ್ಯ ಈ ಎಲ್ಲಾ ಕ್ಷೇತ್ರಗಳಲ್ಲಿ ಎರಡೂ ದೇಶಗಳೂ ಪ್ರಭಾವಿತರಾಗಿ ಪರಸ್ಪರ ಲಾಭವನ್ನು ಪಡೆದುಕೊಳ್ಳಲು ಅನುಕೂಲವಾಯಿತು.

ಘಟಕ 52 ರಲ್ಲಿ ನೀವು ಕುಶಾನರು ಮತ್ತು ಅವರ ಸಾಂಸ್ಕೃತಿಕ ಕೊಡುಗೆಗಳನ್ನು ಅಧ್ಯಯನ ಮಾಡುವಿರಿ. ಕುಶಾನರು ಮಧ್ಯ ಏಷ್ಯಾದಿಂದ ಬಂದು ಭಾರತದಲ್ಲಿ ಮೌರ್ಯ ಸಾಮ್ರಾಜ್ಯದ ನಂತರ ಎರಡನೆಯದಾದ ದೊಡ್ಡ ಸಾಮ್ರಾಜ್ಯವನ್ನು ಕಟ್ಟಿದರು. ಉತ್ತರ ಭಾರತದಲ್ಲಿ ಸ್ವಲ್ಪಮಟ್ಟಿನ ರಾಜಕೀಯ ಐಕ್ಯತೆಯನ್ನು ಸಾಧಿಸಿ, ದಕ್ಷ ಆಡಳಿತವನ್ನು ಸ್ಥಾಪಿಸಿದ್ದಲ್ಲದೆ, ಭಾರತೀಯ ಧರ್ಮ, ಸಾಹಿತ್ಯ ಮತ್ತು ಕಲೆಗಳಿಗೆ ಅದ್ವಿತೀಯವಾದ ಕೊಡುಗೆಯನ್ನು ನೀಡಿದ್ದಾರೆ. ಕುಶಾನರು ಬೌದ್ಧಧರ್ಮದ ಮತ್ತೊಂದು ಶಾಖೆಯಾದ ಮಹಾಯಾನ ಬೌದ್ಧ ಪಂಥವನ್ನು ಪುರಸ್ಕರಿಸಿ, ಅದರ ಏಳಿಗೆ ಮತ್ತು ಪ್ರಸಾರಕ್ಕೆ ಕಾರಣರಾದರು. ಭಾರತೀಯ ಕಲೆಯ ಇತಿಹಾಸದಲ್ಲಿ ಗಾಂಧಾರ ಕಲೆಯೆಂದು ಪ್ರಸಿದ್ಧವಾಗಿರುವ ಕಲೆಗೆ ಉತ್ತೇಜನ ನೀಡಿ ಕಲಾ ಪ್ರಪಂಚದಲ್ಲೇ ವಿಶಿಷ್ಟ ಸ್ಥಾನವನ್ನು ಗಳಿಸಲು ಕಾರಣರಾದರು. ಒಟ್ಟಿನಲ್ಲಿ ಈ ಎರಡು ಘಟಕಗಳಿಂದ ನೀವು ಅರ್ಥಮಾಡಿಕೊಳ್ಳುವುದೇನೆಂದರೆ, ವಿದೇಶಿಯರ ದಾಳಿಗಳಿಂದ ಭಾರತ ಕಳೆದುಕೊಂಡಿದ್ದಕ್ಕಿಂತ ಪಡೆದುಕೊಂಡಿದ್ದೇ ಹೆಚ್ಚು. ಅಲ್ಲದೆ, ವಿದೇಶಿ ದಾಳಿಗಳ ಪರಿಣಾಮದಿಂದ ಭಾರತವು ತನ್ನ ಸಾಂಸ್ಕೃತಿಕ ವೈಶಾಲ್ಯವನ್ನು ವೃದ್ಧಿಸಿಕೊಳ್ಳಲು ಅವಕಾಶವಾಯಿತು.

ಈ ಎಲ್ಲಾ ವಿಷಯಗಳನ್ನು ಈ ಎರಡು ಘಟಕಗಳಲ್ಲಿ ವಿವರವಾಗಿ ಅಧ್ಯಯನ ಮಾಡುವಿರಿ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

## ಘಟಕ - 51

# ಪರ್ಶಿಯನ್ ಮತ್ತು ಗ್ರೀಕರ ಧಾಳಿ - ಭಾರತೀಯ ಸಮಾಜದ ಮೇಲೆ ಅವುಗಳ ಪ್ರಭಾವ


**51.0** ರಚನೆ

**51.1** ಉದ್ದೇಶಗಳು

**51.2** ಪೀಠಿಕೆ

**51.3** ಪರ್ಷಿಯನ್ನರ ಧಾಳಿ

**51.4** ಭಾರತೀಯ ಸಂಸ್ಕೃತಿಯ ಮೇಲೆ ಪರ್ಷಿಯನ್ನರ ದಾಳಿಯ ಪ್ರಭಾವ

- **51.4.1** ಖರೋಷ್ಠಿ ಲಿಪಿ
- **51.4.2** ರಾಜವೈಭವದ ಪದ್ಧತಿ
- **51.4.3** ನಾಣ್ಯಗಳು
- **51.4.4** ವಾಸ್ತುಶಿಲ್ಪ
- **51.4.5** ಸಾಮಾಜಿಕ ಸಂಪ್ರದಾಯಗಳು

**51.5** ಗ್ರೀಕರ ಧಾಳಿ

**51.6** ಭಾರತೀಯ ಸಂಸ್ಕೃತಿಯ ಮೇಲೆ ಗ್ರೀಕರ ದಾಳಿಯ ಪ್ರಭಾವ

- **51.6.1** ಧರ್ಮ
- **51.6.2** ಕಲೆ
- **51.6.3** ತತ್ವಶಾಸ್ತ್ರ
- **51.6.4** ಖಗೋಳಶಾಸ್ತ್ರ ಮತ್ತು ಗಣಿತ
- **51.6.5** ವೈದ್ಯಶಾಸ್ತ್ರ
- **51.6.6** ಸಾಹಿತ್ಯ
- **51.6.7** ನಾಟಕ
- **51.6.8** ನಾಣ್ಯಗಳು

**51.7** ಘಟಕದ ಸಾರಾಂಶ

**51.8** ಅಭ್ಯಸನೀಯ ಗ್ರಂಥಗಳು

**51.9** ನಿಮ್ಮ ಅಭ್ಯಾಸಕ್ಕೆ

## 51.1 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದಾಗ ನೀವು ಈ ಕೆಳಕಂಡ ವಿಷಯಗಳನ್ನು ಅರ್ಥಮಾಡಿಕೊಳ್ಳುವಿರಿ.

* ಕ್ರಿ.ಪೂ. 6ನೇ ಶತಮಾನದಲ್ಲಿ ಭಾರತದ ವಾಯುವ್ಯ ಭಾಗದಲ್ಲಾದ ಪರ್ಷಿಯನ್ನರ ಆಕ್ರಮಣ.
* ಭಾರತೀಯ ಲಿಪಿ, ನಾಣ್ಯಗಳು, ಖಗೋಳಶಾಸ್ತ್ರ ಮತ್ತು ವಾಸ್ತುಶಿಲ್ಪದ ಮೇಲೆ ಪರ್ಷಿಯನ್ನರ ಪ್ರಭಾವ.
* ಗ್ರೀಕ್ ದೊರೆ ಅಲೆಗ್ಸಾಂಡರನ ಧಾಳಿ- ಅಲೆಗ್ಸಾಂಡರ್ ಪಂಜಾಬ್ ಮತ್ತು ಭಾರತದ ಗಡಿ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದು.
* ಪಂಜಾಬ್ ಮತ್ತು ಗಡಿ ಪ್ರದೇಶಗಳಲ್ಲಿ ಗ್ರೀಕರು ನೆಲೆ ನಿಂತಿದ್ದರಿಂದ ಭಾರತ ಮತ್ತು ಗ್ರೀಕ್ ನಡುವಣ ಸಂಬಂಧ ನಿಚ್ಚಳ.
* ಭಾರತೀಯ ಕಲೆ, ನಾಣ್ಯ, ತತ್ವಶಾಸ್ತ್ರ, ಭಾಷೆ ಮತ್ತು ಲಿಪಿ, ನಾಟಕ, ಖಗೋಳಶಾಸ್ತ್ರ, ಗಣಿತ ಮತ್ತು ವೈದ್ಯಶಾಸ್ತ್ರಗಳ ಮೇಲೆ ಗ್ರೀಕರ ಪ್ರಭಾವ.
* ಮೌರ್ಯ ದೊರೆಗಳು ಪರ್ಷಿಯನ್ನರ ಅನೇಕ ರೀತಿ ನೀತಿ ರಿವಾಜುಗಳನ್ನು ಹಾಗೂ ಅನೇಕ ಆಡಳಿತ ತಂತ್ರಗಳನ್ನು ಅನುಕರಣೆ ಮಾಡಿದ್ದು.
* ಭಾರತದ ಪ್ರಸಿದ್ಧ ಗಾಂಧಾರ ಕಲೆ ಗ್ರೀಕರ ಪ್ರಭಾವದಿಂದ ಉದ್ಭವಿಸಿತು.

## 51.2 ಪೀಠಿಕೆ

ಪ್ರಾಚೀನ ಕಾಲದಿಂದಲೂ ಭಾರತ ಪಾಶ್ಚಿಮಾತ್ಯ ದೇಶಗಳೊಡನೆ ವಾಣಿಜ್ಯ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿತ್ತು ಎಂಬುದಾಗಿ ಋಗ್ವೇದ ಮತ್ತು ಪರ್ಶಿಯನ್ನರ ಜೆಂಡ ಅವೆಸ್ತಗಳಲ್ಲಿ ಪ್ರಸ್ತಾಪವಿದೆ. ಭಾರತವು ಪಾಶ್ಚಾತ್ಯ ದೇಶಗಳೊಡನೆ ವಾಣಿಜ್ಯ ಸಂಪರ್ಕವನ್ನು ಹೊಂದಿದ್ದನ್ನು ಸಿಂಧೂ ನಾಗರೀಕತೆ ಸ್ಪಷ್ಟಪಡಿಸುತ್ತದೆ. ಸಿಂಧೂ ನಾಗರೀಕತೆಯು ಪಾಶ್ಚಾತ್ಯ ದೇಶಗಳಾದ ಸುಮೇರಿಯಾ ಮತ್ತು ಈಜಿಪ್ಟ್ ದೇಶಗಳೊಡನೆ ವ್ಯಾಪಾರ ಸಂಪರ್ಕವನ್ನು ಹೊಂದಿತ್ತು ಎನ್ನುವುದನ್ನು ನೀವು ಈಗಾಗಲೇ ಹಿಂದಿನ ಘಟಕಗಳಲ್ಲಿ ತಿಳಿದಿರುವಿರಿ. ಆದರೆ ಭಾರತ ಮತ್ತು ಪರ್ಷಿಯಾ ದೇಶಗಳ ನಡುವೆ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳು ಕ್ರಿ.ಪೂ. 6 ನೇ ಶತಮಾನದಲ್ಲಿ ಭಾರತದ ಮೇಲೆ ಪರ್ಶಿಯನ್ನರು ಮಾಡಿದ ದಾಳಿ, ಆಕ್ರಮಣ ಹಾಗೂ ಅಧಿಕಾರ ಸ್ಥಾಪನೆಯಿಂದ ನಿಚ್ಚಳವಾಗಿ ಪ್ರಾರಂಭವಾದವು. ಪರ್ಶಿಯನ್ನರ ಆಳ್ವಿಕೆಯ ಫಲವಾಗಿ ಭಾರತೀಯರು ಅನೇಕ ಹೊಸ ವಿಷಯಗಳನ್ನು ಅರಿತರು. ಅದರಲ್ಲೂ, ಭಾರತದ ವಾಯುವ್ಯ ಪ್ರದೇಶದಲ್ಲಿ ಪರ್ಶಿಯನ್ನರು ಹೆಚ್ಚಿನ ಪ್ರಭಾವವನ್ನು ಬೀರಿದರು. ಪರ್ಶಿಯನ್ನರ ಆಕ್ರಮಣದ ಪರಿಣಾಮವಾಗಿ ಭಾರತ ಮತ್ತು ಪರ್ಶಿಯಾಗಳ ನಡುವೆ ಭೂಮಾರ್ಗವಾಗಿ ಸಂಪರ್ಕ ಏರ್ಪಟ್ಟಿತು.

ಭಾರತದ ಮೊಟ್ಟ ಮೊದಲ ಸಾಮ್ರಾಜ್ಯ ಸ್ಥಾಪಕರಾದ ಮೌರ್ಯರ ಆಳ್ವಿಕೆಯಲ್ಲಿ ಪರ್ಶಿಯನ್ನರ ಪ್ರಭಾವವನ್ನು ಹೆಚ್ಚಾಗಿ ಕಾಣಬಹುದು. ರಾಜನ ಪಟ್ಟಾಭಿಷೇಕದ ಕಾಲದಲ್ಲಿ ಕಂಡುಬರುವ, ಪವಿತ್ರ ನದಿಗಳ ನೀರಿನಿಂದ ರಾಜನಿಗೆ ಅಭಿಷೇಕ ಮಾಡುವ ಸಂಪ್ರದಾಯವನ್ನು ಚಂದ್ರಗುಪ್ತ ಮೌರ್ಯನು ಪರ್ಶಿಯನ್ನರಿಂದ ಅನುಕರಿಸಿದನು. ಅಶೋಕನ ಶಾಸನಗಳು ಮತ್ತು

ಸ್ತಂಭಗಳಲ್ಲಿ ಪರ್ಶಿಯನ್ನರ ಪ್ರಭಾವವನ್ನು ಕಾಣಬಹುದು. ಅಷ್ಟೇ ಏಕೆ, ಸೆಲ್ಯೂಕಸನ ರಾಯಭಾರಿಯಾಗಿ ಮೌರ್ಯರ ಆಸ್ಥಾನಕ್ಕೆ ಬಂದಿದ್ದ ಮೆಗಾಸ್ತನೀಸನು ಮೌರ್ಯ ವಂಶದ ದೊರೆಗಳು ಪರ್ಶಿಯನ್ ದೊರೆಗಳ ಶೈಲಿಯಲ್ಲಿ ಜೀವಿಸುತ್ತಿದ್ದರೆಂದು ತಿಳಿಸಿದ್ದಾನೆ. ಇಷ್ಟೇ ಅಲ್ಲದೆ, ಭಾರತದ ನಾಣ್ಯಗಳು, ತತ್ವಶಾಸ್ತ್ರ, ವಾಸ್ತುಶಿಲ್ಪ ಈ ಎಲ್ಲಾ ಜೀವನದ ಶೈಲಿಗಳು ಪರ್ಶಿಯನ್ನರ ಪ್ರಭಾವವನ್ನು ಪಡೆದುಕೊಂಡವು. ಎಲ್ಲಕ್ಕಿಂತ ಮಿಗಿಲಾಗಿ, ಭಾರತ ಮತ್ತು ಪರ್ಶಿಯಾ ದೇಶಗಳ ಪ್ರಭಾವದಿಂದಾಗಿ, ಭಾರತದಲ್ಲಿ ರಾಜಕೀಯ ಐಕ್ಯತೆ ಕಂಡುಬಂದುದಲ್ಲದೆ ಮೌರ್ಯ ಸಾಮ್ರಾಜ್ಯದಂತಹ ಪ್ರಬಲ ಸಾಮ್ರಾಜ್ಯಗಳ ಹುಟ್ಟಿಗೆ ಕಾರಣವಾಯಿತು.

ಕ್ರಿ.ಪೂ. 4ನೇ ಶತಮಾನದಲ್ಲಿ ಮ್ಯಾಸಿಡೋನಿಯಾದ ನಾಯಕನಾದ ಅಲೆಗ್ಸಾಂಡರನು ಪರ್ಶಿಯಾ ದೊರೆಯನ್ನು ಅರ್ಬೆಲ ಯುದ್ಧದಲ್ಲಿ ಸಂಪೂರ್ಣವಾಗಿ ಸೋಲಿಸಿ, ಅಕೆಮೆನಿಯನ್ ಸಾಮ್ರಾಜ್ಯವನ್ನು ಕೊನೆಗಾಣಿಸಿದ್ದಷ್ಟೇ ಅಲ್ಲದೆ, ಆ ಸಾಮ್ರಾಜ್ಯಕ್ಕೆ ತಾನೇ ದೊರೆಯಾದನು. ಮಹತ್ವಾಕಾಂಕ್ಷಿಯಾದ ಅಲೆಕ್ಸಾಂಡರನಿಗೆ ಭಾರತದ ಮೇಲೆ ದಾಳಿ ಮಾಡಲು ಮಾರ್ಗವು ತೆರವಾಯಿತು. ಅಲೆಗ್ಸಾಂಡರನು ತಕ್ಷಶಿಲೆ ಮತ್ತು ಸಿಂಧ್ ಪ್ರಾಂತ್ಯಗಳನ್ನು ಜಯಿಸಿ, ಪಂಜಾಬ್‌ನ ಅಧಿಪತಿಯಾದನು. ಅಲ್ಲದೆ, ಭಾರತದಲ್ಲಿ ಗ್ರೀಕರ ಆಳ್ವಿಕೆಯನ್ನು ಸ್ಥಾಪಿಸಿದನು. ಅಲೆಗ್ಸಾಂಡರನ ಆಳ್ವಿಕೆ ಭಾರತದಲ್ಲಿ ಕೇವಲ 19 ತಿಂಗಳುಗಳಾದರೂ, ಅಷ್ಟೇ ಸಮಯದಲ್ಲಿ ಭಾರತೀಯ ಜನಜೀವನದ ಮೇಲೆ ಗ್ರೀಕರ ಮಹತ್ತರ ಪರಿಣಾಮವುಂಟಾಯಿತು. ಅಲೆಗ್ಸಾಂಡರನ ದಾಳಿಯಿಂದ ಭಾರತದ ಭೌಗೋಳಿಕ ಕಕ್ಷೆ ವಿಸ್ತಾರ ಹೊಂದಿದುದಲ್ಲದೆ, ಪಾಶ್ಚಿಮಾತ್ಯ ದೇಶಗಳೊಂದಿಗೆ, ವ್ಯಾಪಾರ ಮತ್ತು ವಾಣಿಜ್ಯಗಳಿಗೆ ಹೊಸ ಮಾರ್ಗ ಹಾಗೂ ಸಂಪರ್ಕಗಳು ಏರ್ಪಟ್ಟವು. ಗ್ರೀಕರ ಕಲೆ, ಖಗೋಳಶಾಸ್ತ್ರ, ನಾಣ್ಯಗಳಲ್ಲಿದ್ದ ಅನೇಕ ವಿಷಯಗಳನ್ನು ಭಾರತೀಯರು ಅನುಸರಿಸಿದರು. ಗಣಿತಶಾಸ್ತ್ರದಲ್ಲಿ ಕಂಡುಬರುವ ಟ್ರೆಪೀಸಿಯಮ್, ಪೈಥಾಗೊರಸ್ ಪ್ರಮೇಯಗಳನ್ನು ಗ್ರೀಕರಿಂದ ಕಲಿತರು. ತತ್ವಶಾಸ್ತ್ರದಲ್ಲಿ ಕಂಡುಬರುವ ಪೌಲಿಸ ಸಿದ್ಧಾಂತ ಮತ್ತು ರೋಮಕ ಸಿದ್ಧಾಂತಗಳು ಗ್ರೀಕ್ ತತ್ವಶಾಸ್ತ್ರದಿಂದ ಭಾರತೀಯ ತತ್ವಶಾಸ್ತ್ರದಲ್ಲಿ ಸೇರ್ಪಡೆಯಾದವು. ಅನೇಕ ಸಂಸ್ಕೃತ ಶಬ್ದಗಳು ಗ್ರೀಕ್ ಭಾಷೆಯಿಂದ ತೆಗೆದುಕೊಳ್ಳಲ್ಪಟ್ಟಿವೆ. ಗ್ರೀಕರ ದಾಳಿಯಿಂದ ಗ್ರೀಕ್ ನಟರು ಮತ್ತು ಸಂಗೀತಕಾರರು ಭಾರತಕ್ಕೆ ಆಗಮಿಸಿದಂತಾಯಿತು. ಸಂಸ್ಕೃತ ಮಹಾಕವಿಯಾದ ಕಾಳಿದಾಸನು ಉಲ್ಲೇಖಿಸಿರುವ ಗುಹಾ ರಂಗಮಂದಿರಗಳು ಗ್ರೀಕರಿಂದ ಕಟ್ಟಲ್ಪಟ್ಟವುಗಳಾಗಿವೆ.

## 51.3 ಪರ್ಶಿಯನ್ನರ ದಾಳಿ

ಕ್ರಿ.ಪೂ. ಆರನೇ ಶತಮಾನದ ಉತ್ತರಾರ್ಧದಲ್ಲಿ ಭಾರತದ ವಾಯುವ್ಯ ಭಾಗದಲ್ಲಿ ಪರ್ಶಿಯನ್ನರ ರಾಜಕೀಯ ಮತ್ತು ಮಿಲಿಟರಿ ಚಟುವಟಿಕೆಗಳು ಪ್ರಾರಂಭವಾದವು. ಪರ್ಶಿಯಾದ ಅಕೆಮೇನಿಯನ್ ಸಾಮ್ರಾಜ್ಯ ಸ್ಥಾಪಕನಾದ ಒಂದನೇ ಸೈರಸ್‌ನು ಬ್ಯಾಕ್ಟ್ರಿಯಾ, ಬ್ಯಾಬಿಲೋನಿಯಾ ಮತ್ತು ಅಸ್ಸೈರಿಯಾಗಳನ್ನು ಗೆದ್ದುಕೊಂಡು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ನಂತರ ಗೆಡ್ರೋಸಿಯಾದ ಮೂಲಕ ಭಾರತದ ಮೇಲೆ ದಾಳಿಮಾಡಿ ಆಫ್ಘಾನಿಸ್ತಾನದ ಪ್ರಸಿದ್ಧ ನಗರವಾಗಿದ್ದ ಕಪಿಸವನ್ನು ನಾಶಮಾಡಿದನೆಂದು ಗ್ರೀಕ್ ಇತಿಹಾಸಕಾರ ಪ್ಲೀನಿಯು ಹೇಳುತ್ತಾರೆ. ಒಂದನೇ ಸೈರಸ್‌ನ ಉತ್ತರಾಧಿಕಾರಿಯಾದ ಡೇರಿಯಸ್ ಉತ್ತರ ಭಾರತದ ಮತ್ತಷ್ಟು ಪ್ರಾಂತ್ಯಗಳನ್ನು ವಶಪಡಿಸಿಕೊಂಡು ತನ್ನ ಅಧಿಕಾರವನ್ನು ವಿಸ್ತರಿಸಿದನು ಎಂದು ಅವನ ಮೂರು ಶಾಸನಗಳು ತಿಳಿಸುತ್ತವೆ. ಡೇರಿಯಸ್ಸನ ಸೇನಾನಾಯಕನಾಗಿದ್ದ ಸೈಲಾಕ್ಸನು ಗಾಂಧಾರವನ್ನು ವಶಪಡಿಸಿಕೊಂಡನು. ಅಲ್ಲದೆ, ಗಾಂಧಾರವು ಪರ್ಶಿಯನ್ ಸಾಮ್ರಾಜ್ಯದ ಬಹು ಮುಖ್ಯವಾದ 20 ನೇ ಸತ್ರಪಿಯಾಗಿತ್ತು. ಈ ಸತ್ರಪಿಯು ಭಾರತದ ಪ್ರಾಂತ್ಯಗಳಲ್ಲೆಲ್ಲಾ ವಿಶಾಲವಾಗಿದ್ದು, ಪೂರ್ಣ ಸಿಂಧೂ ಕಣಿವೆಯನ್ನು ಆವರಿಸಿದ್ದುದಲ್ಲದೆ, ಝೀಲಂ ಜಿಲ್ಲೆಯವರೆಗೂ ಹರಡಿತ್ತು. ಈ ಸತ್ರಪಿಯು ಪರ್ಶಿಯನ್ ಸಾಮ್ರಾಜ್ಯದ ಶ್ರೀಮಂತ

ಹಾಗೂ ಜನಭರಿತವಾದ ಸತ್ರಪಿಯಾಗಿತ್ತೆಂದೂ, ಒಂದು ಕೋಟಿ 50 ಲಕ್ಷ ಕಂದಾಯವು ಇಲ್ಲಿಂದ ಬರುತ್ತಿತ್ತೆಂದೂ ಹೆರೋಡೊಟಸ್‌ನು ತಿಳಿಸುತ್ತಾನೆ. ಗಾಂಧಾರ ಮತ್ತು ಪಂಜಾಬ್‌ಗಳ ಆಡಳಿತವನ್ನು ನೋಡಿಕೊಳ್ಳಲು ಪರ್ಶಿಯನ್ ಗವರ್ನರ್‌ಗಳನ್ನು ನೇಮಕ ಮಾಡಲಾಗಿತ್ತು.

ಡೇರಿಯಸ್ಸನು ವಿಶೇಷ ಭಾರತೀಯ ಸೇನಾಪಡೆಯನ್ನು ಹೊಂದಿದ್ದನು. ಭಾರತೀಯ ಸೇನಾಪಡೆಯ ವೇಷಭೂಷಣಗಳನ್ನು ಹೆರೋಡೊಟಸ್‌ನು ವಿವರಿಸುತ್ತಾನೆ. ಭಾರತೀಯ ಸೈನಿಕರು ಹತ್ತಿ ಬಟ್ಟೆಗಳಿಂದ ಕೂಡಿದ ಉಡುಪನ್ನು ತೊಟ್ಟು, ಬಿಲ್ಲು ಬಾಣಗಳನ್ನು ಹಿಡಿದು ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರೆಂದು ಹೆರೋಡಟಸ್‌ನಿಂದ ತಿಳಿದು ಬರುತ್ತದೆ. ಕ್ಸೆರಕ್ಸ್‌ನ ಕಾಲದಲ್ಲೂ ಭಾರತೀಯ ಸತ್ರಪಿಯು ಪರ್ಶಿಯನ್ನರ ಹತೋಟಿಗೊಳಪಟ್ಟಿತ್ತು. ಅದೇ ದೊರೆಯ ಪರ್ಸಿಪೋಲಿಸ್ ಶಾಸನವು ಗಾಂಧಾರ ಮತ್ತು ಸಿಂಧ್ ಪ್ರದೇಶಗಳು ಪರ್ಶಿಯದ ದೊರೆಗೆ ಸೇರಿದ ಭಾರತೀಯ ಸತ್ರಪಿಗಳಾಗಿದ್ದವು ಎಂಬುದಾಗಿ ಉಲ್ಲೇಖಿಸುತ್ತದೆ. ಮೂರನೇ ಡೇರಿಯಸ್ಸನ ಆಳ್ವಿಕೆಯವರೆಗೂ ಭಾರತೀಯ ಸತ್ರಪಿ ಪರ್ಶಿಯನ್ನರ ಆಡಳಿತಕ್ಕೊಳಪಟ್ಟಿತ್ತು. ಕ್ರಿ.ಪೂ. 330 ರಲ್ಲಿ ಡೇರಿಯಸ್ಸನಿಗೂ, ಅಲೆಗ್ಸಾಂಡರನಿಗೂ ನಡೆದ ಅರ್ಬೆಲ ಕದನದಲ್ಲಿ ಡೇರಿಯಸ್ಸನ ಪರವಾಗಿ ಭಾರತೀಯ ಸೈನಿಕರು ಯುದ್ಧ ಮಾಡಿ ತಮ್ಮ ಶಕ್ತಿ ಮತ್ತು ಸಾಹಸಗಳನ್ನು ಪ್ರದರ್ಶಿಸಿದರು. ಆದರೆ ಈ ಯುದ್ಧದಲ್ಲಿ ಪರ್ಶಿಯನ್ನರು ಸೋತು, ಅಲೆಗ್ಸಾಂಡರನು ಭಾರತದಲ್ಲಿದ್ದ ಪರ್ಶಿಯನ್ ಸತ್ರಪಿಯನ್ನು ಕ್ರಿ.ಶ. 327 ರಲ್ಲಿ ತನ್ನ ವಶಪಡಿಸಿಕೊಂಡನು. ಈ ಘಟನೆಯೊಂದಿಗೆ ಭಾರತದ ಕೆಲವು ಭೂಭಾಗದ ಮೇಲಿದ್ದ ಪರ್ಶಿಯನ್ನರ ಹತೋಟಿ ಕೊನೆಗೊಂಡಿತಲ್ಲದೆ ಅಕೆಮೇನಿಯನ್ ಸಾಮ್ರಾಜ್ಯದ ಅವನತಿಯು ಆರಂಭವಾಯಿತು. ಅಲೆಗ್ಸಾಂಡರನು ಭಾರತದಲ್ಲಿದ್ದ ಪರ್ಶಿಯನ್ ಸತ್ರಪಿಯಲ್ಲಿ ಗ್ರೀಕರ ಆಳ್ವಿಕೆಯನ್ನು ನೆಲೆಗೊಳಿಸಿ, ಕ್ರಮೇಣ ಉತ್ತರ ಭಾರತದ ಪ್ರದೇಶಗಳನ್ನು ಆಕ್ರಮಿಸಿಕೊಂಡನು.

## 51.4 ಭಾರತೀಯ ಸಂಸ್ಕೃತಿಯ ಮೇಲೆ ಪರ್ಶಿಯನ್ನರ ದಾಳಿಯ ಪ್ರಭಾವ

ಯಾವುದೇ ಎರಡು ದೇಶಗಳು ವ್ಯಾಪಾರದ ಮೂಲಕ ಅಥವಾ ದಿಗ್ವಿಜಯಗಳ ಮೂಲಕ ಸಂಪರ್ಕವನ್ನು ಪಡೆದಾಗ ಅವರವರ ಸಂಸ್ಕೃತಿಗಳಿಂದ ಪರಸ್ಪರ ಪ್ರಭಾವಿತರಾಗುವುದು ಸಹಜ ಕ್ರಿಯೆ. ಈ ಕ್ರಿಯೆಯಿಂದ ಎರಡೂ ದೇಶಗಳೂ ಲಾಭ ಪಡೆದುಕೊಳ್ಳುತ್ತವೆ. ಭಾರತ ಮತ್ತು ಪರ್ಶಿಯಾ ದೇಶಗಳೊಡನೆ ಏರ್ಪಟ್ಟ ವಾಣಿಜ್ಯ ಸಂಪರ್ಕ ಕೇವಲ ವ್ಯಾಪಾರಕ್ಕೆ ಮಾತ್ರ ಸೀಮಿತವಾಗದೆ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳು ಸ್ಥಾಪನೆಯಾದವು. ಪರ್ಶಿಯನ್ನರ ಆಕ್ರಮಣ ಮತ್ತು ಆಳ್ವಿಕೆಯಿಂದ ಭಾರತೀಯರು ಅನೇಕ ಹೊಸ ವಿಷಯಗಳನ್ನು ಕಲಿತರು. ಪರ್ಶಿಯನ್ನರ ಆಕ್ರಮಣವು ಭಾರತದಲ್ಲಿ ರಾಜಕೀಯ ಐಕ್ಯತೆಯ ಮಹತ್ವವನ್ನು ಮನದಟ್ಟುಮಾಡಿಸಿತು. ಇದರ ಪ್ರಭಾವದಿಂದ ಶೈಶುನಾಗರು ಮತ್ತು ಮೌರ್ಯರು ಉತ್ತರ ಭಾರತವನ್ನು ಒಗ್ಗೂಡಿಸಿ, ತಮ್ಮ ಸಾಮ್ರಾಜ್ಯವನ್ನು ಕಟ್ಟಲು ಪ್ರೇರಣೆ ಪಡೆದರು. ಮೌರ್ಯರು ಅದರಲ್ಲೂ ಮುಖ್ಯವಾಗಿ ಆಡಳಿತ ಕ್ಷೇತ್ರದಲ್ಲಿ, ಪರ್ಶಿಯನ್ನರನ್ನು ಬಹಳಷ್ಟು ಅನುಕರಿಸಿದರು. ಪರ್ಶಿಯನ್ನರ ಆಸ್ಥಾನದ ನಡವಳಿಕೆ ಮತ್ತು ರೀತಿನೀತಿಗಳಿಂದ ಮೌರ್ಯರು ಪ್ರಭಾವಿತರಾಗಿ ಅವುಗಳನ್ನು ತಮ್ಮ ಆಸ್ಥಾನದಲ್ಲಿ ಅನುಸರಿಸಿದರು. ಭಾರತೀಯ ವ್ಯಾಪಾರಗಾರರು ತಮ್ಮ ಸರಕುಗಳೊಂದಿಗೆ ಪರ್ಶಿಯಾ ದೇಶಕ್ಕೆ ಹೋಗುತ್ತಿದ್ದುದಲ್ಲದೆ, ಭಾರತೀಯ ವಿದ್ವಾಂಸರು ಮತ್ತು ತತ್ವಜ್ಞಾನಿಗಳು ಪರ್ಶಿಯಾ ದೇಶದಲ್ಲಿ ಸ್ವತಂತ್ರವಾಗಿ ಸಂಚರಿಸಿ, ಪಾಶ್ಚಿಮಾತ್ಯ ದೇಶಗಳೊಂದಿಗೆ ಭಾರತದ ಸಂಪರ್ಕವನ್ನು ಉತ್ತಮಗೊಳಿಸಿದರು.

ಭಾರತ ಮತ್ತು ಪರ್ಶಿಯಾ ದೇಶಗಳ ಸಂಪರ್ಕದಿಂದ ಭಾರತದ ಜನಜೀವನದ ಯಾವ ಯಾವ ಕ್ಷೇತ್ರಗಳಲ್ಲಿ ಪರಿಣಾಮ ಉಂಟುಮಾಡಿತು ಎಂಬುದನ್ನು ತಿಳಿಯೋಣ.

### 51.4.1 ಬರವಣಿಗೆ-ಖರೋಷ್ಠಿ ಲಿಪಿ

ಪರ್ಶಿಯನ್ ಬರಹಗಾರರು ಆರಾಮಿಕ್ ಮಾದರಿಯ ಬರಹವನ್ನು ಪರಿಚಯ ಮಾಡಿಸಿದರು. ಇದೇ ಮುಂದೆ ಬಲದಿಂದ ಎಡಕ್ಕೆ ಬರೆಯುವ ಪ್ರಸಿದ್ಧ ಖರೋಷ್ಠಿ ಲಿಪಿಯಾಯಿತು. ಭಾರತದಲ್ಲಿ ಪರ್ಶಿಯನ್ನರ ಅರಾಮಿಕ್ ಲಿಪಿಯ ಪರಿಚಯವಿತ್ತು ಎನ್ನುವುದನ್ನು ತಕ್ಷಶಿಲೆಯಲ್ಲಿ ದೊರೆತಿರುವ ಒಂದು ಶಾಸನವು ದೃಢಪಡಿಸುತ್ತದೆ. ಕಾಂದಾಹಾರ್‌ನಲ್ಲಿ ದೊರೆತಿರುವ ಮತ್ತೊಂದು ದ್ವಿಭಾಷಾ ಅಶೋಕನ ಶಾಸನ, ಅಶೋಕನು ತನ್ನ ಪಶ್ಚಿಮ ಪ್ರಾಂತ್ಯಗಳಲ್ಲಿ ಅರಾಮಿಕ್ ಲಿಪಿಯನ್ನು ಉಪಯೋಗಿಸುತ್ತಿದ್ದನೆಂದು ಉಲ್ಲೇಖಿಸುತ್ತವೆ. ಅಶೋಕನ ಕಾಲದಲ್ಲೇ ಅರಾಮಿಕ್ ಲಿಪಿಯಲ್ಲಿ 35 ಅಕ್ಷರಗಳನ್ನೊಳಗೊಂಡ ವರ್ಣಮಾಲೆಯ ಪರಿಚಯವಿದ್ದಿತು. ಇದರಿಂದ ಭಾರತದ ವಾಯುವ್ಯ ಭಾಗದಲ್ಲಿ ಕ್ರಿ.ಪೂ. 257 ರ ವೇಳೆಗೆ ಖರೋಷ್ಠಿ ಲಿಪಿ ಪ್ರಚಲಿತದಲ್ಲಿತ್ತು ಎಂಬುದು ತಿಳಿದುಬರುತ್ತದೆ. ಕಲ್ಲುಬಂಡೆಗಳ ಮೇಲೆ ನೀತಿ ತತ್ವಗಳನ್ನು ಕೆತ್ತಿಸುವ ಮತ್ತು ರಾಜಾಜ್ಞೆಗಳನ್ನು ಹೊರಡಿಸುವ ಕಲ್ಪನೆಗಳು ಪರ್ಶಿಯನ್ನರಿಂದ ತೆಗೆದುಕೊಂಡವಾಗಿದೆ. ಅಕೆಮೇನಿಯನ್ ಶಾಸನ ಹಾಗೂ ಅಶೋಕನ ಶಾಸನಗಳಿಗೂ ಕೆಲವು ಹೋಲಿಕೆಗಳು ಕಂಡು ಬರುತ್ತವೆ. ಎರಡೂ ಶಾಸನಗಳಲ್ಲಿ ಪೀಠಿಕಾ ವಾಕ್ಯಗಳ ರಚನೆ, ರಾಜನ ಬಿರುದುಗಳ ಜೋಡಣೆ, ಆಸ್ಥಾನದ ಶೈಲಿ ಇವುಗಳಲ್ಲಿ ಬಹಳಷ್ಟು ಸಾಮಾನ್ಯ ಹೋಲಿಕೆಗಳು ಕಂಡು ಬರುತ್ತವೆ.

### 51.4.2 ರಾಜವೈಭವದ ಪದ್ಧತಿ

ಭಾರತೀಯ ರಾಜರು ನೆರೆಹೊರೆಯ ರಾಜ್ಯಗಳೊಂದಿಗೆ ಯುದ್ಧಗಳನ್ನು ಮಾಡಿ ಅವರನ್ನು ಜಯಿಸಿ, ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವುದನ್ನು ಪರ್ಶಿಯನ್ನರಿಂದ ಅನುಕರಿಸಿದರು. ಮೌರ್ಯ ದೊರೆ ಬಿಂಬಿಸಾರನು ಡೇರಿಯಸ್ಸನ ರಾಜ್ಯ ವಿಸ್ತರಣಾನೀತಿಯಿಂದ ಪ್ರಭಾವಿತನಾದನು. ಅಷ್ಟೇ ಏಕೆ ಬಿರುದು ಬಾವಲಿಗಳನ್ನು ಧರಿಸುವುದೂ ಕೂಡ ಪರ್ಶಿಯನ್ನರ ರೀತಿಯೇ. ಕಾಂದಾಹಾರ್‌ನಲ್ಲಿ ದೊರೆತಿರುವ ದ್ವಿಭಾಷಾ ಶಾಸನವು ಅಶೋಕನನ್ನು 'ಸಮಸ್ತ ಪೃಥ್ವೀಪತಿ' ಎಂದು ಉಲ್ಲೇಖಿಸುತ್ತದೆ. ಕ್ರಮೇಣ ಭಾರತೀಯ ರಾಜರು ಪರ್ಶಿಯನ್ ಬಿರುದುಗಳನ್ನು ಧರಿಸಲು ಪ್ರಾರಂಭಿಸಿದರು. ಅಲ್ಲದೆ, ಹಲವಾರು ಅಧಿಕಾರಿಗಳು ಪರ್ಶಿಯನ್ ಹೆಸರುಗಳನ್ನು ಇಟ್ಟುಕೊಂಡಿದ್ದನ್ನು ಕಾಣಬಹುದು. ಉದಾಹರಣೆಗೆ, ಮೌರ್ಯ ಸಾಮ್ರಾಜ್ಯದ ಪಶ್ಚಿಮ ಭಾಗದ ಆಳ್ವಿಕೆಯನ್ನು ನೋಡಿಕೊಳ್ಳುತ್ತಿದ್ದ ಅಶೋಕನ ಗವರ್ನರ್ 'ತುಷಸ್ಪ' ಎಂಬ ಹೆಸರನ್ನು ಹೊಂದಿದ್ದನು. ಪರ್ಶಿಯನ್ ಸಾಮ್ರಾಜ್ಯದ ಇಪ್ಪತ್ತನೇ ಸತ್ರಪಿಯಾಗಿದ್ದ ಪಂಜಾಬ್ ಪ್ರಾಂತ್ಯದಲ್ಲಿ ಸರ್ಕಾರದ ಸೇವೆಯಲ್ಲಿ ಪರ್ಶಿಯನ್ ಅಧಿಕಾರಿಗಳಿದ್ದುದರಿಂದ ಅವರ ಪ್ರಭಾವವು ಅಲ್ಲಿನ ಆಡಳಿತದ ಮೇಲಷ್ಟೇ ಅಲ್ಲದೆ ಜನರ ಸಂಪ್ರದಾಯ ಆಚರಣೆಗಳಲ್ಲೂ ಕಂಡು ಬಂದಿತು. ರಸ್ತೆಗಳ ನಿರ್ಮಾಣ ಮತ್ತು ಲೋಕೋಪಯೋಗಿ ಕಾರ್ಯಗಳೂ ಕೂಡ ಪರ್ಶಿಯನ್ನರಿಂದ ಪ್ರಭಾವಿತಗೊಂಡಿವೆ.

### 51.4.3 ನಾಣ್ಯಗಳು

ಭಾರತದಲ್ಲಿ ಕಂಡುಬರುವ ಅತ್ಯಂತ ಪ್ರಾಚೀನ ನಾಣ್ಯವಾದ 'ಕಾರ್ಷಪಣ'. ಕಾರ್ಸ ಎಂದರೆ ಸ್ವಲ್ಪ ಮಟ್ಟಿನ ತೂಕ ಎಂದು ಇರಾನ್ ಶಬ್ದಕೋಶದಲ್ಲಿ ಕಂಡು ಬರುತ್ತದೆ. ಪರ್ಶಿಯನ್ ಸಾಮ್ರಾಜ್ಯದ ಭಾಗವಾಗಿದ್ದ ಭಾರತದ ಸತ್ರಪಿಯಲ್ಲಿ ಪರ್ಶಿಯನ್ನರ 'ಸಿಗ್‌ಲೋಯಿ' ಎಂಬ ಬೆಳ್ಳಿ ನಾಣ್ಯಗಳು ಚಲಾವಣೆಯಲ್ಲಿದ್ದವು. ಕೆಲವು ಸಿಗ್‌ಲೋಯಿ ಬೆಳ್ಳಿ ನಾಣ್ಯಗಳಲ್ಲಿ ಪಂಚ್‌ಮಾರ್ಕ್ ನಾಣ್ಯಗಳಂತೆ ಮುದ್ರೆಗಳು ಮತ್ತು ಕೆಲವು ನಾಣ್ಯಗಳಲ್ಲಿ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳು ಕಂಡು ಬರುತ್ತವೆ. ಇದರಿಂದ ಪರ್ಶಿಯನ್ನರ ಸಿಗ್‌ಲೋಯಿ ಮತ್ತು ಭಾರತೀಯ ಪಂಚ್ ಮಾರ್ಕ್ ನಾಣ್ಯಗಳು ಏಕಕಾಲದಲ್ಲಿ ಚಲಾವಣೆಯಲ್ಲಿದ್ದವು ಎನ್ನುವುದು ತಿಳಿದುಬರುತ್ತದೆ. ಪರ್ಶಿಯನ್ನರ ಸಂಪರ್ಕದಿಂದ ಭಾರತದಲ್ಲಿ ಚಿನ್ನ ಮತ್ತಿತರ ಲೋಹಗಳ ನಾಣ್ಯಗಳು ಚಲಾವಣೆಗೆ ಬಂದವು.

### 51.4.4 ವಾಸ್ತುಶಿಲ್ಪ

ಭಾರತ ಮತ್ತು ಪರ್ಶಿಯಾ ದೇಶಗಳ ನಡುವೆ ಬೆಳೆದ ಸಂಪರ್ಕವನ್ನು ತಿಳಿಯಲು ಮೌರ್ಯರ ರಾಜಧಾನಿಯಾದ ಪಾಟಲೀಪುತ್ರದಲ್ಲಿದ್ದ ಅನೇಕ ಕಟ್ಟಡಗಳು ನಿಖರವಾದ ಸಾಕ್ಷಿಗಳನ್ನು ಒದಗಿಸುತ್ತವೆ. ಮೌರ್ಯರ ಅರಮನೆಗೂ ಪರ್ಶಿಯನ್ ರಾಜಧಾನಿಯಾದ ಸೂಸಾ ಅರಮನೆಗೂ ಬಹಳಷ್ಟು ಹೋಲಿಕೆಗಳು ಕಂಡು ಬರುತ್ತವೆ. ಆರ್.ಎ. ಜೈರನ್‌ಬೇ ಅವರು ಮೌರ್ಯರ ಕಾಲದ ವಾಸ್ತುಶಿಲ್ಪದಲ್ಲಿ ಪರ್ಶಿಯನ್ನರ ಪ್ರಭಾವ ನಿಚ್ಚಳವಾಗಿ ಕಂಡುಬರುತ್ತದೆ ಎಂದಿದ್ದಾರೆ. ಪರ್ಶಿಪೋಲಿಸ್‌ನಲ್ಲಿದ್ದ ಡೇರಿಯಸ್ಸನ 100 ಸ್ತಂಭಗಳ ಸಭಾಂಗಣವನ್ನು ಪಾಟಲೀಪುತ್ರದಲ್ಲಿ ಕಂಡುಬಂದ ಮೌರ್ಯರ ಚಚ್ಚೌಕವಾದ ಸಭಾಂಗಣ ಹೋಲುತ್ತದೆ. ಪಾಟಲೀಪುತ್ರದ ಸಭಾಂಗಣವು ಅನೇಕ ಸಾಲು ಸ್ತಂಭಗಳನ್ನು ಹೊಂದಿದ್ದು, ಚಚ್ಚೌಕವಾದ ಸಭಾಂಗಣ ಪರ್ಶಿಯನ್ ಮಾದರಿಯ ವಾಸ್ತುಶಿಲ್ಪವನ್ನು ಹೋಲುತ್ತದೆ. ಸ್ತಂಭಗಳಿಗೆ ಹೊಳಪನ್ನು ನೀಡಲು ಬಳಸಿರುವ ಪಾಲಿಷ್ ಪರ್ಶಿಯಾ ದೇಶದಿಂದ ತರಿಸಿಕೊಂಡಿರುವುದಾಗಿದೆ. ಪರ್ಶಿಯನ್ ಗಾರೆ ಕೆಲಸದವರು ಭಾರತೀಯ ಗಾರೆ ಕೆಲಸದವರಿಗೆ ಕಲ್ಲುಗಳಿಗೆ ಹೊಳಪಾದ ಪಾಲಿಷ್‌ಗಳನ್ನು ಕೊಡುವ ಬಗೆಯನ್ನು ತಿಳಿಸಿಕೊಟ್ಟರು. ಅಶೋಕನ ಸ್ತಂಭಗಳಲ್ಲಿ ಕಂಡು ಬರುವ ವೃತ್ತಾಕಾರದ ಗಂಟೆಯಾಕಾರವೂ, ಸಿಂಹ ಮತ್ತು ವೃಷಭಗಳ ಚಿತ್ರಗಳುಳ್ಳ ಕಕ್ಷೆಗಳು ಅಪ್ಪಟ ಪರ್ಶಿಯನ್ ಮೂಲದವುಗಳಾಗಿವೆ. ಅಶೋಕನ ಸ್ತಂಭಗಳಲ್ಲಿ ಕಂಡು ಬರುವ ರೆಕ್ಕೆಗಳಿರುವ ಪ್ರಾಣಿಗಳು, ಗಂಟೆಯಾಕಾರದಲ್ಲಿ ಬಗ್ಗಿರುವ ಕಮಲದ ಹೂಗಳು ಕೂಡ ಪರ್ಶಿಯನ್ ಮಾದರಿಗಳಾಗಿವೆ.

ಸಾಂಚಿ ಪೂರ್ವದ್ವಾರದಲ್ಲಿರುವ ಒಂದು ಪಟ್ಟಿಕೆ, ಅರಮನೆಯ ಚಾವಣಿಯಾಗಿದ್ದು, ಜೋಡಿ ಸಿಂಹಗಳು, ಮೇಕೆಗಳು, ಕುದುರೆಗಳು ಮತ್ತು ಆನೆಗಳನ್ನು ಒಂದರ ಹಿಂದೊಂದು ಜೋಡಿಸಲ್ಪಟ್ಟಿವೆ. ಇದು ಪರ್ಶಿಪೋಲಿಸ್‌ನಲ್ಲಿರುವ ವೃಷಭಗಳ ಜೋಡಿಯನ್ನು ಹೋಲುತ್ತವೆ. ರಾಜ ಪ್ರಭುತ್ವದ ಕಲ್ಪನೆಯನ್ನು ಮೊಟ್ಟ ಮೊದಲಿಗೆ ಪರ್ಶಿಯನ್ನರಿಂದ ಪಡೆದ ಭಾರತೀಯರು ಸಿಂಹಗಳನ್ನು ತಮ್ಮ ಗುರುತುಗಳಾಗಿ ತೆಗೆದುಕೊಂಡಿರುವ ಸಾಧ್ಯತೆಯಿದೆ. ಅಶೋಕ ಸ್ತಂಭಗಳಲ್ಲಿ ಕಂಡುಬರುವ ಸಿಂಹಗಳು ನಿಸ್ಸಂಶಯವಾಗಿಯೂ ಅಕೆಮನಿಡ್‌ರದ್ದೇ ಆಗಿದೆ. ಅಶೋಕನು ಬೌದ್ಧಧರ್ಮದ ತತ್ವಗಳನ್ನು ಬಂಡೆಗಲ್ಲುಗಳ ಮೇಲೆ ಸ್ತಂಭಗಳ ಮೇಲೆ ಕೆತ್ತಿಸಿರುವುದು ಕೂಡ ಪರ್ಶಿಯನ್ನರ ಪ್ರಭಾವವೇ ಆಗಿದೆ. ಅಷ್ಟೇ ಅಲ್ಲದೆ, ಮೌರ್ಯರ ಅರಮನೆಯಲ್ಲಿ ಮತ್ತು ಆಸ್ಥಾನದಲ್ಲಿ ನಡೆಯುತ್ತಿದ್ದ ಅನೇಕ ನಡವಳಿಕೆಗಳು ಪರ್ಶಿಯನ್ ಮಾದರಿಯವಾಗಿದ್ದವು. ಇದರಿಂದ ಭಾರತ ಮತ್ತು ಪರ್ಶಿಯಾ ದೇಶಗಳೊಡನೆ ಸಾಂಸ್ಕೃತಿಕ ಸಂಪರ್ಕ ಉಂಟಾಯಿತು.

### 51.4.5 ಸಾಮಾಜಿಕ ಸಂಪ್ರದಾಯಗಳು

ಪರ್ಶಿಯನ್ನರ ಆಳ್ವಿಕೆಯಿಂದ ಅನೇಕ ಪರ್ಶಿಯನ್ನರು ಪಾಟಲೀಪುತ್ರದಲ್ಲಿ ನೆಲಸುವಂತಾಯಿತು. ಪಾಟಲೀಪುತ್ರದಲ್ಲಿ ನೆಲೆಸಿದ್ದ ಪರ್ಶಿಯನ್ನರಿಗೆ ಉತ್ತಮ ಅನುಕೂಲಗಳನ್ನು ಕಲ್ಪಿಸಿಕೊಡಲಾಗಿತ್ತು ಎಂಬುದಾಗಿ ಮೆಗಾಸ್ತನೀಸನು ಹೇಳುತ್ತಾನೆ. ಮೌರ್ಯರು ಪರ್ಶಿಯನ್ನರ ಅನೇಕ ಪದ್ಧತಿಗಳನ್ನು ಅನುಕರಿಸಿದರು. ಚಂದ್ರಗುಪ್ತನು ಮೆರವಣಿಗೆಯ ಕಾಲದಲ್ಲಿ ಪರ್ಶಿಯನ್ನರ ವಸ್ತುವಾದ ಚಿನ್ನದ ಕರಂಡಕಗಳನ್ನು ಹೊತ್ತು ತಂದು ಸಿಂಹಾಸನದ ಪಕ್ಕದಲ್ಲಿ ಇಡುವುದನ್ನು ರೂಢಿಗೆ ತಂದನು. ಮೌರ್ಯ ದೊರೆಗಳು ಪರ್ಶಿಯನ್ ದೊರೆಗಳಂತೆ ಪರ್ಶಿಯನ್ ದೊರೆಗಳ ರೀತಿ ರಿವಾಜುಗಳನ್ನು ಅನುಸರಿಸುತ್ತಿದ್ದರೆಂದು ಮೆಗಸ್ತಾನೀಸನು ಹೇಳುತ್ತಾನೆ. ಮೌರ್ಯ ದೊರೆಗಳು ಪರ್ಶಿಯನ್ ದೊರೆಗಳಂತೆ, ಜನಗಳಿಂದ ಸ್ವಲ್ಪ ದೂರದಲ್ಲಿ ಅಂಗರಕ್ಷಕರೊಂದಿಗೆ ವಾಸಿಸುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರಜೆಗಳಿಗೆ ಕಾಣಿಸಿಕೊಳ್ಳುತ್ತಿದ್ದರು ಎಂದು ಮೆಗಾಸ್ತನೀಸನು ಹೇಳಿದ್ದಾನೆ. ಹಬ್ಬಗಳಲ್ಲಿ ಚಂದ್ರ ಗುಪ್ತ ಮೌರ್ಯನು ಮೊದಲು ಕೂದಲನ್ನು ತೊಳೆದುಕೊಳ್ಳುವ

ಅಥವಾ ಅಭ್ಯಂಜನ ಮಾಡಿಕೊಳ್ಳುವ ಪರ್ಶಿಯನ್ ರೀತಿಯನ್ನು ಅನುಸರಿಸುತ್ತಿದ್ದನು. ಅಲ್ಲದೆ, ಹಲವಾರು ಪರ್ಶಿಯನ್ ದೊರೆಗಳು ಅನುಸರಿಸುತ್ತಿದ್ದ ಆಸ್ಥಾನದ ಆಚರಣೆಗಳನ್ನು ಜಾರಿಗೆ ತಂದನು. ಅನೇಕ ಪರ್ಶಿಯನ್ ನೋಬಲ್ಲರನ್ನು ಮೌರ್ಯ ಚಕ್ರಾಧಿಪತ್ಯದ ಸೇವೆಯಲ್ಲಿ ಸೇರಿಸಲಾಯಿತು. ಪರ್ಶಿಯನ್ ಸ್ತ್ರೀಯರನ್ನು ಮೌರ್ಯ ದೊರೆಗಳಿಗೆ ಅಂಗರಕ್ಷಕರನ್ನಾಗಿ ನೇಮಕ ಮಾಡಲಾಯಿತು. ಇದೆಲ್ಲದರ ಪರಿಣಾಮವಾಗಿ, ಪರ್ಶಿಯನ್ ಆಚರಣೆಗಳು ಭಾರತೀಯ ಆಚರಣೆಗಳಲ್ಲಿ ವಿಲೀನವಾಗಿ ಯಾವುದರಿಂದ ಯಾವುದು ಪ್ರಭಾವಿತವಾಗಿದೆ ಎಂದು ಹೇಳುವುದೇ ಕಷ್ಟ ಎಂದು ಹಾವೆಲ್‌ರವರು ಹೇಳುತ್ತಾರೆ. ಹೀಗೆ ಪರ್ಶಿಯನ್ನರು ಭಾರತದ ಮೇಲೆ ಹಲವಾರು ರೀತಿಯಲ್ಲಿ ತಮ್ಮದೇ ಆದ ಪ್ರಭಾವವನ್ನು ಬೀರಿರುವುದಲ್ಲದೆ ಭಾರತದ ಸಂಸ್ಕೃತಿಯ ಪರಿಚಯವನ್ನು ಪಾಶ್ಚಾತ್ಯ ಜಗತ್ತಿಗೂ ಮಾಡಿಕೊಟ್ಟು ಭಾರತದ ಬಗ್ಗೆ ವಿದೇಶಿಯರಲ್ಲಿ ಹೆಚ್ಚಿನ ಆಸಕ್ತಿ ಹುಟ್ಟುವಂತೆ ಮಾಡಿದರು.

## 51.5 ಗ್ರೀಕರ ಧಾಳಿ

ಪರ್ಶಿಯನ್ನರ ನಂತರ ಭಾರತದ ಮೇಲೆ ಧಾಳಿ ಮಾಡಿದ ವಿದೇಶಿಯರಲ್ಲಿ ಗ್ರೀಕರು ಎರಡನೆಯವರು. ಗ್ರೀಕರು ತಮ್ಮ ನಾಯಕ ಮ್ಯಾಸಿಡೋನಿಯಾದ ಅಲೆಗ್ಸಾಂಡರನ ನೇತೃತ್ವದಲ್ಲಿ ನಡೆಸಿದ ಧಾಳಿ ಭಾರತದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಭಾರತದ ಕಾಲಗಣನಾಶಾಸ್ತ್ರದಲ್ಲಿ ಗ್ರೀಕರ ಧಾಳಿ ಮೊದಲ ಪುಟ.

ಅಲೆಗ್ಸಾಂಡರನು ಮ್ಯಾಸಿಡೋನಿಯಾದ ದೊರೆ ಫಿಲಿಪ್ಪನ ಮಗ. ದೊರೆ ಫಿಲಿಪ್ಪನು ತನ್ನ ಮಗನ ವಿದ್ಯಾಭ್ಯಾಸಕ್ಕಾಗಿ ಪ್ರಸಿದ್ಧ ತತ್ವಜ್ಞಾನಿಯೊಬ್ಬನನ್ನು ನೇಮಿಸಿದನು. ಆದರೆ ಅಲೆಗ್ಸಾಂಡರನ ಆಸಕ್ತಿ ವೀರರ ಕಥನಗಳಲ್ಲಿದ್ದುದರಿಂದ ತತ್ವಜ್ಞಾನದಲ್ಲಿ ಆತನ ಮನ ನೆಲಸಲಿಲ್ಲ. ಕ್ರಿ.ಪೂ. 335 ರಲ್ಲಿ ಫಿಲಿಪ್ಪನ ಮರಣಾನಂತರ ಅಲೆಗ್ಸಾಂಡರನು ಮ್ಯಾಸಿಡೋನಿಯಾದ ದೊರೆಯಾದನು. ಅವನು ಬಹಳ ಮಹತ್ವಾಕಾಂಕ್ಷಿಯಾಗಿದ್ದು, ಪ್ರಪಂಚದ ಪ್ರಸಿದ್ಧ ಆಕ್ರಮಣಕಾರಿಯಾಗಬೇಕೆಂಬ ಆಸೆಯನ್ನು ಹೊಂದಿದ್ದನು. ಎರಡು ವರ್ಷಗಳ ಅವಧಿಯಲ್ಲಿ ಅತಿ ದೊಡ್ಡ ಸೈನ್ಯವನ್ನು ಶೇಖರಿಸಿ, ಪರ್ಶಿಯನ್ ಸಾಮ್ರಾಜ್ಯದ ಕಡೆ ಮುಂದುವರಿದನು. ಅಲೆಗ್ಸಾಂಡರನ ಸೈನ್ಯ ಪರ್ಶಿಯಾದ ದೊರೆ ಮೂರನೇ ಡೇರಿಯಸ್ಸನನ್ನು ಅರಬೆಲ ಕದನದಲ್ಲಿ ಕ್ರಿ.ಪೂ. 331 ರಲ್ಲಿ ಸಂಪೂರ್ಣವಾಗಿ ಸೋಲಿಸಿ ಅಕೆಮೆನಿಯನ್ ಸಾಮ್ರಾಜ್ಯವನ್ನು ಕೊನೆಗಾಣಿಸಿದನು. ದಿಗ್ವಿಜಯಿಯಾದ ಅಲೆಗ್ಸಾಂಡರನು ಪರ್ಶಿಯಾದ ರಾಜಧಾನಿಯಾಗಿದ್ದ ಪರ್ಸಿಪೊಲಿಸ್ ಅನ್ನು ವಶಪಡಿಸಿಕೊಂಡು ಅದನ್ನು ನಾಶಮಾಡಿದನು. ಈ ಅರಬೆಲ ಕದನದಲ್ಲಿ ದೊರೆತ ವಿಜಯದಿಂದ ಅಲೆಗ್ಸಾಂಡರನು ಏಷ್ಯಾ ಮೈನರ್, ಈಜಿಪ್ಟ್, ಸಿರಿಯಾ ಮತ್ತು ಸೈಸ್ತಾನ್‌ಗಳ ಒಡೆಯನಾದನು. ಅಲೆಗ್ಸಾಂಡರನು ಮುಂದುವರಿದು ಆಫ್ಘಾನಿಸ್ತಾನ ಮತ್ತು ಬ್ಯಾಕ್ಟ್ರಿಯಾಗಳನ್ನು ಗೆದ್ದುಕೊಂಡು 'ಪರ್ಶಿಯಾದ ಶ್ರೇಷ್ಠ ರಾಜ' ಎಂಬ ಬಿರುದನ್ನು ಪಡೆದನು.

ತದನಂತರ ಅಲೆಗ್ಸಾಂಡರನು ಪರ್ಶಿಯನ್ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದ ಭಾರತದ ಭಾಗಗಳಾದ ಕಾಬೂಲ್ ಕಣಿವೆ, ಪಂಜಾಬ್, ಸಿಂಧೂನದಿಯ ಕೆಳಗಣ ಬಯಲು ಪ್ರದೇಶಗಳ ಮೇಲೆ ತನ್ನ ಸೈನಿಕ ಕಾರ್ಯಾಚರಣೆಯನ್ನು ನಡೆಸಿ ಅವುಗಳನ್ನು ತನ್ನ ವಶಪಡಿಸಿಕೊಂಡನು. ಭಾರತದಲ್ಲಿದ್ದ ಅನೈಕ್ಯತೆಯ ರಾಜಕೀಯ ಪರಿಸ್ಥಿತಿಯ ಸದುಪಯೋಗವನ್ನು ಪಡೆದುಕೊಂಡ ಅಲೆಗ್ಸಾಂಡರನು ಒಬ್ಬ ರಾಜನ ವಿರುದ್ಧ ಮತ್ತೊಬ್ಬ ರಾಜನನ್ನು ಎತ್ತಿ ಕಟ್ಟಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಲು ಮುಂದಾದನು. ಅಲೆಗ್ಸಾಂಡರನು ಪುಷ್ಕಲವತಿಯನ್ನು ವಶಪಡಿಸಿಕೊಂಡು ತಕ್ಷಶಿಲೆಯೆಡೆಗೆ ಧಾವಿಸಿದನು. ತಕ್ಷಶಿಲೆಯ ರಾಜನಾದ ಅಂಬಿಯು ಅಲೆಗ್ಸಾಂಡರನಿಗೆ ಶರಣಾಗತನಾದನು. ಜೀಲಂ ಮತ್ತು ಚೀನಾಬ್ ನದಿಗಳ ನಡುವಣ ಪ್ರದೇಶದ ರಾಜನಾಗಿದ್ದ ಪೋರಸ್ಸನು ಅಲೆಗ್ಸಾಂಡರನ ಸೈನ್ಯವನ್ನು ಧೈರ್ಯ ಶೌರ್ಯಗಳಿಂದ ಎದುರಿಸಿದನು. ಆದರೆ ಪೋರಸ್ಸನು ಜಯಗಳಿಸಲಾಗಲಿಲ್ಲ.

ಅಲೆಗ್ಸಾಂಡರನ ಬಂಧಿಯಾಗಬೇಕಾಯಿತು. ಕೆಚ್ಚೆದೆಯ ವೀರನಾದ ಪೋರಸ್ಸನು ಅಲೆಗ್ಸಾಂಡರನನ್ನು ತನ್ನನ್ನು ರಾಜನಂತೆ ನಡೆಸಿಕೊಳ್ಳಬೇಕೆಂದು ಕೇಳಿಕೊಂಡನು. ಅವನ ಕೆಚ್ಚೆದೆಗೆ ಹಾಗೂ ಸ್ವಾಭಿಮಾನಕ್ಕೆ ಮೆಚ್ಚಿದ ಅಲೆಗ್ಸಾಂಡರನು ಅವನನ್ನು ಬಿಡುಗಡೆಗೊಳಿಸಿ ಅವನ ರಾಜ್ಯವನ್ನು ಮರಳಿ ನೀಡಿ, ತನ್ನ ಪ್ರಭುತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಅಲೆಗ್ಸಾಂಡರನಿಗೆ ಭಾರತವನ್ನು ಸಂಪೂರ್ಣವಾಗಿ ಗೆಲ್ಲಬೇಕೆಂಬ ಆಸೆಯಿದ್ದರೂ, ಅವನ ಸೈನ್ಯ ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ. ತತ್ಪರಿಣಾಮವಾಗಿ ಅವನು ತನ್ನ ದೇಶಕ್ಕೆ ಹಿಂದಿರುಗಬೇಕಾಯಿತು. ತನ್ನ ಸ್ವದೇಶವನ್ನು ತಲುಪುವ ಮೊದಲೇ ಜ್ವರಪೀಡಿತನಾದ ಅಲೆಗ್ಸಾಂಡರನು ಕ್ರಿ.ಪೂ. 323 ರಲ್ಲಿ ಬ್ಯಾಬಿಲೋನ್ ನಗರದಲ್ಲಿ ಮೃತ್ಯುವಶನಾದನು.

ಅಲೆಗ್ಸಾಂಡರನು ಗ್ರೀಕ್ ನೆಲೆಯನ್ನು ಸ್ಥಾಪಿಸುವ ಮೊದಲೇ ಪಂಜಾಬ್‌ನಲ್ಲಿ ಹಲವಾರು ಗ್ರೀಕರು ನೆಲೆಗೊಂಡಿದ್ದರು. ಇವರು ಪಂಜಾಬ್‌ನಿಂದ ಭಾರತದೆಡೆಗೆ ಬರುವ ಮಾರ್ಗದಲ್ಲಿ ದೊಡ್ಡ ಗ್ರೀಕ್ ಕಾಲೋನಿಯನ್ನು ಬ್ಯಾಕ್ಟ್ರಿಯಾದಲ್ಲಿ ಸ್ಥಾಪಿಸಿದ್ದರು. ಮೌರ್ಯರ ಅವನತಿಯ ನಂತರ ಮಧ್ಯ ಏಷ್ಯಾದಲ್ಲಿ ಉಂಟಾದ ಗೊಂದಲದಿಂದ ಬ್ಯಾಕ್ಟ್ರಿಯನ್ ಗ್ರೀಕರು ಹಿಂದೂ ಕುಷ್ ಪರ್ವತದ ದಕ್ಷಿಣಕ್ಕೆ ತಳ್ಳಲ್ಪಟ್ಟರು. ಅಲ್ಲಿ ಸಗಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತಮ್ಮದೇ ಆದ ಒಂದು ರಾಜ್ಯವನ್ನು ಸ್ಥಾಪಿಸಿಕೊಂಡರು. ಕೆಲವು ಕಾಲದ ನಂತರ ಇಂಡೋ ಗ್ರೀಕರ ರಾಜ್ಯ ಸಣ್ಣ ಪುಟ್ಟ ರಾಜ್ಯಗಳಾಗಿ ಒಡೆದು ಹೋದವು. ಕುಶಾನರ ರಾಜನಾದ ಕಾನಿಷ್ಕನು ಸಣ್ಣ ಪುಟ್ಟ ಗ್ರೀಕ್ ರಾಜ್ಯಗಳನ್ನು ಸದೆಬಡಿದು ತನ್ನ ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು.

## 51.6 ಭಾರತೀಯ ಸಂಸ್ಕೃತಿಯ ಮೇಲೆ ಗ್ರೀಕರ ಧಾಳಿಯ ಪ್ರಭಾವ

ಈಗ ಪ್ರಶ್ನೆಯೆಂದರೆ, ಗ್ರೀಕರು ಎಷ್ಟರಮಟ್ಟಿಗೆ ಭಾರತೀಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದರು ಎಂಬುವುದು. ಭಾರತೀಯ ಜನಜೀವನದ ಮೇಲೆ ಗ್ರೀಕರ ಪ್ರಭಾವ ಎಷ್ಟು ಎಂಬುದನ್ನು ನಿರ್ಧರಿಸುವುದು ಕಷ್ಟ. ಮೌರ್ಯ ದೊರೆಗಳು ರಾಯಭಾರಿಗಳನ್ನು ಗ್ರೀಕ ದೇಶಕ್ಕೆ ಕಳುಹಿಸುವ ಮತ್ತು ಗ್ರೀಕ್ ದೇಶದಿಂದ ರಾಯಭಾರಿಗಳನ್ನು ಕರೆಸಿಕೊಳ್ಳುವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಸೆಲ್ಯೂಕಸ್ಸನು ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಮೆಗಾಸ್ತನೀಸನನ್ನೂ ಬಿಂದುಸಾರನ ಆಸ್ಥಾನಕ್ಕೆ ಡೈಮೋಕಸ್‌ನನ್ನು ಕಳುಹಿಸಿದ್ದನು. ಟಾಲೆಮಿ ಫಿಲಿಡೆಲ್ಫಸ್ ಡಯೋನಿಷಿಯಸ್‌ನನ್ನು ಮೌರ್ಯರ ಆಸ್ಥಾನಕ್ಕೆ ಕಳುಹಿಸಿದ್ದನು. ಅಶೋಕನ ಆಳ್ವಿಕೆಯಲ್ಲಿ ಅಲೆಗ್ಸಾಂಡ್ರಿಯಾದಲ್ಲಿ ಭಾರತೀಯ ವ್ಯಾಪಾರಿಗಳು ಕಾಲೋನಿಯೊಂದನ್ನು ಕಟ್ಟಿಕೊಂಡಿದ್ದರು. ಚಂದ್ರಗುಪ್ತ ಮೌರ್ಯನು ಗ್ರೀಕ್ ಸ್ತ್ರೀಯರನ್ನು ವಿವಾಹವಾಗಿದ್ದನು. ಸೆಲ್ಯೂಕಸ್ಸನು ತನ್ನ ದೇಶದಿಂದ ದ್ರಾಕ್ಷಾರಸವನ್ನು ಬಿಂಬಸಾರನಿಗೆ ಕಳುಹಿಸಿ ಕೊಟ್ಟಿದ್ದನು. ಅಶೋಕನು ಈಜಿಪ್ಟ್, ಸಿರಿಯಾ, ಮ್ಯಾಸಿಡೋನಿಯಾಗಳ ಗ್ರೀಕ್ ರಾಜರಿಗೆ ಬೌದ್ಧ ಭಿಕ್ಷುಗಳನ್ನು ಕಳುಹಿಸಿಕೊಟ್ಟಿದ್ದನು. ಅಶೋಕನು ತನ್ನ ಸಾಮ್ರಾಜ್ಯದ ಅತ್ಯಂತ ಶ್ರೀಮಂತ ಪ್ರದೇಶವಾಗಿದ್ದ ಸೌರಾಷ್ಟ್ರದ ನೀರಾವರಿ ವ್ಯವಸ್ಥೆಯನ್ನು ಸುಗಮಗೊಳಿಸಲು ಗ್ರೀಕ್ ಮುಖಂಡನಿಗೆ ವಹಿಸಿದ್ದನು. ಇಷ್ಟಾದರೂ ಗ್ರೀಕರ ಪ್ರಭಾವ ಭಾರತೀಯ ಜನಜೀವನದ ಮೇಲೆ ಹೆಚ್ಚೇನೂ ಆಗಲಿಲ್ಲ.

ಆದರೆ ಹಾಗೆಂದು ಅಲೆಗ್ಸಾಂಡರನ ಧಾಳಿಯ ಪರಿಣಾಮವನ್ನು ಅಲ್ಲಗಳೆಯಲಾಗುವುದಿಲ್ಲ. ಅಲೆಗ್ಸಾಂಡರನ ದಾಳಿ ಭಾರತದಲ್ಲಿ ರಾಜಕೀಯ ಐಕ್ಯತೆಯನ್ನುಂಟುಮಾಡಿತು. ಅದರ ಪರಿಣಾಮವಾಗಿ ಮೌರ್ಯರು ಸಣ್ಣ ಪುಟ್ಟ ರಾಜ್ಯಗಳನ್ನೆಲ್ಲಾ ಒಗ್ಗೂಡಿಸಿ, ಒಂದು ಪ್ರಬಲ ಸಾಮ್ರಾಜ್ಯವನ್ನು ಕಟ್ಟಿದರು. ಅಲೆಗ್ಸಾಂಡರನ ಧಾಳಿ, ಭಾರತದ ಭೌಗೋಳಿಕ ಕಕ್ಷೆಯನ್ನು ವಿಸ್ತರಿಸಿದ್ದೇ ಅಲ್ಲದೆ, ಹೊಸ ವ್ಯಾಪಾರ ಮಾರ್ಗಗಳನ್ನು, ಸಮುದ್ರ ವ್ಯಾಪಾರವನ್ನೂ ಹೆಚ್ಚಿಸಿ, ನಿಸ್ಸಂದೇಹವಾಗಿ ಪೂರ್ವ ಮತ್ತು ಪಶ್ಚಿಮ ದೇಶಗಳ ನಡುವೆ ನಿಕಟವಾದ ಸಂಪರ್ಕವನ್ನುಂಟುಮಾಡಿತು. ಭಾರತದ ಜನಜೀವನದ ಮೇಲೆ

ಗ್ರೀಕರ ಪ್ರಭಾವವನ್ನುಂಟು ಮಾಡಿದವರು ಅಲೆಗ್ಸಾಂಡರ್‌ನಿಗಿಂತ ಮಿಗಿಲಾಗಿ, ವಾಯುವ್ಯ ಭಾರತದಲ್ಲಿ ಅಲೆಗ್ಸಾಂಡರನ ದಾಳಿಗೆ ಮೊದಲೇ ನೆಲೆಗೊಂಡಿದ್ದ ಇಂಡೋ ಗ್ರೀಕರು. ಇಂಡೋ ಗ್ರೀಕರು ಎರಡೂ ಸಂಸ್ಕೃತಿಗಳನ್ನು ಹತ್ತಿರ ತಂದು ನಿಕಟ ಸಂಪರ್ಕವನ್ನೇರ್ಪಡಿಸಿ ಪರಸ್ಪರ ಪ್ರಭಾವಕ್ಕೊಳಗಾಗುವಂತೆ ಮಾಡಿದರು.

### 51.6.1 ಧರ್ಮ

ಮಹಾಯಾನ ಬೌದ್ಧ ಪಂಥದ ಬೆಳವಣಿಗೆಯಲ್ಲಿ ಗ್ರೀಕರಲ್ಲಿ ರೂಢಿಯಲ್ಲಿದ್ದ ಬಹುದೇವತಾರಾಧನೆಯ ಪ್ರಭಾವ ಸ್ವಲ್ಪಮಟ್ಟಿಗೆ ಕಂಡು ಬರುತ್ತದೆ. ಆದರೆ ಹಿಂದೂ ಧರ್ಮದ ಮೇಲೆ ಗ್ರೀಕರ ಪ್ರಭಾವ ಕಂಡು ಬರುವುದಿಲ್ಲ. ಹಿಂದೂಗಳು ಗ್ರೀಕರ ಧಾರ್ಮಿಕ ನಂಬಿಕೆಗಳನ್ನಾಗಲೀ ಅಥವಾ ಗ್ರೀಕ್ ದೇವತೆಗಳನ್ನಾಗಲೀ ಪೂಜಿಸಿದ ಕುರುಹುಗಳು ಕಂಡು ಬಂದಿಲ್ಲ. ಆದರೆ ವಿದೇಶಿಯರು ಹಿಂದೂ ಧರ್ಮಕ್ಕೆ ಆಕರ್ಷಕರಾಗಿರುವುದು ಸಾಮಾನ್ಯವಾಗಿ ಇತಿಹಾಸದಲ್ಲಿ ಕಂಡುಬರುವ ವಿಷಯವಾಗಿದೆ. ಗ್ರೀಕ್ ದೊರೆ ಮಿನಾಂಡರನು ಬೌದ್ಧ ಧರ್ಮವನ್ನು ಸ್ವೀಕರಿಸಿದುದು ಇದಕ್ಕೆ ಉತ್ತಮ ಉದಾಹರಣೆ. ಗ್ರೀಕರು ಹರಕೆ ಸಲ್ಲಿಸುತ್ತಿರುವ ದೃಶ್ಯಗಳನ್ನು ನಾಸಿಕ್ ಮತ್ತು ಕರಾಲ ಗುಹೆಗಳಲ್ಲಿ ಕಾಣಬಹುದು. ಅಷ್ಟೇ ಅಲ್ಲದೆ, ಗ್ರೀಕರು ಕಾರ್ಲೆ ಮತ್ತು ನಾಸಿಕ್ ಬೌದ್ಧ ಗುಹೆಗಳಿಗೆ ಧಾರಾಳವಾಗಿ ದಾನವನ್ನು ನೀಡಿ, ಅವುಗಳ ಅಭಿವೃದ್ಧಿಗೆ ನೆರವಾಗಿದ್ದಕ್ಕೆ ಉಲ್ಲೇಖಗಳು ದೊರೆಯುತ್ತವೆ.

### 51.6.2 ಕಲೆ

ಭಾರತದಲ್ಲಿ ನಗರ ಯೋಜನೆಯ ಕಲ್ಪನೆ ಗ್ರೀಕರಿಂದ ಪರಿಚಯಿಸಲ್ಪಟ್ಟಿರಬಹುದೆಂದು ತೋರುತ್ತದೆ. ಅಲೆಗ್ಸಾಂಡರನು ಅಕೆಸಿನಸ್ ಮತ್ತು ಅಲೆಗ್ಸಾಂಡ್ರಿಯ ಎಂಬ ಎರಡು ನಗರಗಳನ್ನು ನಿರ್ಮಿಸಿದುದಾಗಿ ತಿಳಿದು ಬರುತ್ತದೆ. ಗ್ರೀಕರು ತಮ್ಮ ಮಿಲಿಟರಿ ಕಾರ್ಯಾಚರಣೆಗಾಗಿ ಭೂಮಿಯನ್ನು ಕೊರೆದು ಸುರಕ್ಷಿತ ಸ್ಥಳಗಳನ್ನು ನಿರ್ಮಿಸಿಕೊಳ್ಳುತ್ತಿದ್ದುದನ್ನು ಭಾರತೀಯರು ಅಳವಡಿಸಿಕೊಂಡರು. ಇದಕ್ಕೆ ಸಂಬಂಧಿಸಿದಂತೆ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಸುರಂಗ ಎಂಬ ಪದವನ್ನು ಗ್ರೀಕ್ ಪದವಾದ ಸಿರಿಂಕ್ಸ್ ಎಂಬ ಪದದಿಂದ ಪಡೆದುಕೊಳ್ಳಲಾಗಿದೆ ಎಂದು ಹೇಳಿದ್ದಾನೆ. ಅಲೆಗ್ಸಾಂಡರನ ವಶದಲ್ಲಿದ್ದ ಭಾರತೀಯ ನಗರಗಳಲ್ಲಿ ವಿದೇಶಿಯರು ವಾಸ ಮಾಡಲು ಅವಕಾಶವನ್ನು ಕಲ್ಪಿಸಿಕೊಡಲಾಗಿತ್ತು. ಪ್ರತಿಯೊಂದು ಗ್ರೀಕ್ ಸತ್ರಪಿಗಳಲ್ಲಿ ಮತ್ತು ಹೊಸದಾಗಿ ನಿರ್ಮಿಸಿದ ನಗರಗಳಲ್ಲಿ ಅಲೆಗ್ಸಾಂಡರನು ತನ್ನ ಸಿಪಾಯಿಗಳನ್ನು ನಿಯೋಜಿಸುವ ನೀತಿಯನ್ನು ಅನುಸರಿಸುತ್ತಿದ್ದನು. ಅಲೆಗ್ಸಾಂಡರನು 80 ಗ್ಯಾಲಿಗಳಿರುವ ಹಡಗನ್ನು ಕಟ್ಟಿ, ಜೀಲಂ ನದಿಯನ್ನು ದಾಟಲು ಅದನ್ನು ಉಪಯೋಗಿಸಿದ್ದುದಾಗಿ ತಿಳಿದುಬರುತ್ತದೆ.

ಅಶೋಕನ ಬಂಡೆ ಶಾಸನಗಳು ಪರ್ಶಿಯನ್ನರಿಂದ ಪಡೆದವುಗಳಾಗಿವೆ ಎಂಬುದನ್ನು ಈಗಾಗಲೇ ತಿಳಿಸಲಾಗಿದೆ. ಹಾಗೆಯೇ ಶಿಲಾ ಸ್ತಂಭಗಳನ್ನು ಕೆತ್ತಿಸಿ, ಅವುಗಳನ್ನು ನಿಲ್ಲಿಸುವ ಪದ್ಧತಿಯನ್ನು ಗ್ರೀಕರಿಂದ ಭಾರತೀಯ ರಾಜರು ಪಡೆದುಕೊಂಡರು. ಈ ಸ್ತಂಭಗಳ ಮೂಲೋತ್ಪತ್ತಿ ಅಲೆಗ್ಸಾಂಡರನಿಂದ ಪ್ರಾರಂಭವಾಯಿತು. ಅಲೆಗ್ಸಾಂಡರ್ ತಾನು ಗೆದ್ದ ಸ್ಥಳಗಳಲ್ಲಿ ವಿಜಯದ ಕುರುಹಾಗಿ ಶಿಲಾ ಸ್ತಂಭಗಳನ್ನು ನೆಟ್ಟನು. ಇಂತಹ ಪ್ರತಿಯೊಂದು ಸ್ತಂಭದ ಬೋದಿಗೆಯ ಕೆಳಗೂ " ಇಲ್ಲಿ ಅಲೆಗ್ಸಾಂಡರ್ ನಿಂತಿದ್ದನು" ಎನ್ನುವ ಶಾಸನವನ್ನು ಕೆತ್ತಿಸಿದ್ದನು. ಇದರಂತೆಯೇ ಬೌದ್ಧಧರ್ಮದ ತತ್ವಗಳನ್ನು ಹಾಗೂ ನೀತಿ ಪಾಠಗಳನ್ನು ಶಿಲಾಸ್ತಂಭಗಳ ಮೇಲೆ ಕೆತ್ತಿಸುವುದನ್ನು ಅಶೋಕನು ಅನುಸರಿಸಿದನು. ಭಾರತದಲ್ಲಿ ಶಿಲಾಸ್ತಂಭಗಳನ್ನು ನಿಲ್ಲಿಸುವುದು ಮತ್ತು ಶಾಸನಗಳನ್ನು ಕೆತ್ತಿಸುವ ಪದ್ಧತಿ ಸಂಪೂರ್ಣವಾಗಿ ಗ್ರೀಕರ ಪ್ರಭಾವದಿಂದ ಬಂದುದು ಎನ್ನುವುದನ್ನು ಬಲಪಡಿಸಲು ಯಾವುದೇ ಪ್ರಾಚೀನ ಭಾರತೀಯ ಗ್ರಂಥಗಳು ವಿಜಯಸ್ತಂಭ ಅಥವಾ ಜಯಸ್ತಂಭಗಳ ಬಗ್ಗೆ

ಉಲ್ಲೇಖಿಸುವುದಿಲ್ಲ. ಆದರೆ ಬಲಿದಾನದ ಕುರುಹಾಗಿ ನಿರ್ಮಿಸುತ್ತಿದ್ದ ಯೂಪಸ್ತಂಭಗಳನ್ನು ಮಾತ್ರ ಭಾರತೀಯ ಗ್ರಂಥಗಳು ಹೆಸರಿಸುತ್ತವೆ. ಆದ್ದರಿಂದ ಅಶೋಕನು ನೆಡಿಸಿದ ಸ್ತಂಭಗಳು ನೂರಕ್ಕೆ ನೂರರಷ್ಟು ಗ್ರೀಕರ ಪ್ರಭಾವವನ್ನು ಹೊಂದಿವೆ ಎನ್ನುವುದು ಸ್ಪಷ್ಟವಾಗುತ್ತದೆ. ಅಶೋಕನ ಸ್ತಂಭ ಶಾಸನಗಳು ಅವನ ಸೈನಿಕ ದಿಗ್ವಿಜಯದ ಕುರುಹುಗಳಲ್ಲವೆಂಬುದು ಸತ್ಯವಾದರೂ, ಅವು ನೀತಿ ಪಾಠಗಳ ಹಾಗೂ ಧರ್ಮ ಸ್ಮರಣಾರ್ಥವಾಗಿ ಕೆತ್ತಿಸಿದ ಸ್ಮಾರಕಗಳಾಗಿವೆ. ಕುಶಾನರ ಆಳ್ವಿಕೆಯ ಕಾಲದಲ್ಲಿ ಭಾರತದ ಉತ್ತರ ಗಡಿ ಪ್ರಾಂತ್ಯಗಳಲ್ಲಿ ಕಂಡು ಬರುವ ಭಾರತೀಯ ಶಿಲ್ಪಕಲೆ ಗ್ರೀಕರ ಕಲೆಯಿಂದ ಪ್ರಭಾವಿತವಾಗಿದೆ. ಗ್ರೀಕ್ ಶೈಲಿಯ ಅನೇಕ ಭಾವಗಳು ಬುದ್ಧನ ಚಿತ್ರಗಳಲ್ಲಿ ಪ್ರತಿಬಿಂಬಿತವಾಗಿವೆ. ಗ್ರೀಕರ ಶಿಲ್ಪಗಳಾದ ಅಪೋಲೊ, ಯಕ್ಷ, ಕುಬೇರ ಮುಂತಾದ ಶಿಲ್ಪಗಳು ಬೌದ್ಧ ಶಿಲ್ಪದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡವು. ಇದರ ಪರಿಣಾಮವಾಗಿ, ಭಾರತದಲ್ಲಿ ಗಾಂಧಾರ ಕಲೆಯೆಂಬ ಒಂದು ಹೊಸ ಕಲೆ ತಲೆ ಎತ್ತಿತು. ವಿ.ಎ. ಸ್ಮಿತ್‌ರು ಗುಪ್ತರ ಕಲೆ ಸಂಪೂರ್ಣವಾಗಿ ಭಾರತೀಯದ್ದಾದರೂ ಅವುಗಳಲ್ಲಿ ಪೂರ್ವ ಮತ್ತು ಪಶ್ಚಿಮ ಶೈಲಿಗಳು ಸಮ್ಮಿಲನಗೊಂಡಿವೆ ಎಂದು ಹೇಳುತ್ತಾರೆ.

### 51.6.3 ತತ್ವಶಾಸ್ತ್ರ

ತತ್ವಶಾಸ್ತ್ರದ ಕ್ಷೇತ್ರದಲ್ಲಿ ಗ್ರೀಕರು ಭಾರತೀಯರಿಂದ ಪಡೆದುಕೊಂಡಿದ್ದೇ ಹೆಚ್ಚು ಎನಿಸಿದರೂ ಭಾರತೀಯ ತತ್ವ ಶಾಸ್ತ್ರಜ್ಞರು ಗ್ರೀಕ್ ತತ್ವಶಾಸ್ತ್ರವನ್ನು ಮತ್ತು ಅವರ ಪ್ರತಿಪಾದನೆಯನ್ನು ಕಲಿತರು ಎಂಬುದಕ್ಕೆ ನಮ್ಮಲ್ಲಿ ಸಾಕಷ್ಟು ಪುರಾವೆಗಳಿವೆ. ಹಾಗೆಯೇ ಗ್ರೀಕರು ಭಾರತೀಯ ತತ್ವಶಾಸ್ತ್ರಜ್ಞರ ವಿದ್ಯಾರ್ಥಿಗಳಾಗಿದ್ದು, ಅವರಿಂದ ಭೋದನೆಗಳನ್ನು ಪಡೆಯುತ್ತಿದ್ದರು ಎಂಬುದಕ್ಕೂ ಸ್ಪಷ್ಟವಾದ ಆಧಾರಗಳಿವೆ. ಗ್ರೀಕರು ಭಾರತೀಯ ಸಾಧು ಸಂನ್ಯಾಸಿಗಳು ಅನುಸರಿಸುತ್ತಿದ್ದ ಪದ್ಧತಿಗಳನ್ನು ಹಾಗೂ ಅವರ ನಂಬಿಕೆಗಳನ್ನು ತಿಳಿದುಕೊಂಡರು. ಭಾರತೀಯ ತತ್ವಶಾಸ್ತ್ರದ ಮುಖ್ಯ ತತ್ವವಾದ ತಪಸ್ಸು, ತಪಸ್ಸಿನಿಂದ ಆತ್ಮವನ್ನು ದೇಹದಿಂದ ಬಿಡುಗಡೆಗೊಳಿಸಿ, ಅದನ್ನು ಪರಮಾತ್ಮನೊಂದಿಗೆ ವಿಲೀನಗೊಳಿಸುವುದು. ಯೋಗತತ್ವ, ಮುಕ್ತಿ ಮುಂತಾದವುಗಳನ್ನು ಗ್ರೀಕ್ ತತ್ವಜ್ಞಾನಿಗಳು ಕಲಿತರು. ಗೂಡ ತತ್ವ ಹಾಗೂ ಗೂಡಾರ್ಥಗಳನ್ನು ಪ್ರತಿಬಿಂಬಿಸುವ ಗ್ರೀಕರ ಶಾಖೆಗಳಾದ ಆರ್ಫಿಕ್ ಮತ್ತು ಫೈಥಾಗೊರಿಯನ್ ಶಾಖೆಗಳು ಭಾರತೀಯ ನಂಬಿಕೆಗಳಿಂದ ಪ್ರಭಾವಿತವಾದವು. ಗ್ರೀಕರ ನಂಬಿಕೆಗಳಾದ ಪುನರ್ಜನ್ಮ, ಕರ್ಮ ಸಿದ್ಧಾಂತಗಳು ಭಾರತೀಯ ತತ್ವಶಾಸ್ತ್ರದಿಂದ ತೆಗೆದುಕೊಂಡವುಗಳಾಗಿವೆ.

### 51.6.4 ಖಗೋಳಶಾಸ್ತ್ರ ಮತ್ತು ಗಣಿತಶಾಸ್ತ್ರ

ಖಗೋಳಶಾಸ್ತ್ರದ ಮೇಲೆ ಗ್ರೀಕ್ ಬರಹಗಾರರ ಪ್ರಭಾವವನ್ನು ಭಾರತೀಯ ಬರಹಗಾರರು ಯವನೇಶ್ವರ ಅಥವಾ ಯವನಾಚಾರ್ಯ ಎಂಬುದಾಗಿ ಉಲ್ಲೇಖಿಸುತ್ತಾರೆ. ಭಾರತೀಯರು ಗ್ರೀಕರಿಂದ ಖಗೋಳಶಾಸ್ತ್ರದ ಜ್ಞಾನವನ್ನು ಪಡೆದುಕೊಂಡರು. ಖಗೋಳಶಾಸ್ತ್ರದ ಎರಡು ಪ್ರಸಿದ್ಧ ಸಿದ್ಧಾಂತಗಳಾದ ರೋಮಕ ಸಿದ್ಧಾಂತ ಮತ್ತು ಪೌಲಿಸ್ ಸಿದ್ಧಾಂತಗಳು ಯವನರಿಂದಲೇ ಪ್ರಾರಂಭಗೊಂಡವು. ಅಲೆಗ್ಸಾಂಡ್ರಿಯಾದ ಪೌಲ ಎಂಬುವನಿಂದ ಪೌಲಿಸ್ ಸಿದ್ಧಾಂತ ಮತ್ತು ರೋಮ್ ನಗರದ ರೋಮಕ ಎಂಬುವನು ರೋಮಕ ಸಿದ್ಧಾಂತಗಳನ್ನು ಪ್ರತಿಪಾದಿಸಿದರು. ಈ ಈರ್ವರು ಋಷಿಗಳೆಂದು ಪರಿಗಣಿಸಲ್ಪಟ್ಟಿದ್ದಾರೆ. ವಿದೇಶಿಯರಾದ ಗ್ರೀಕರಲ್ಲಿ ಖಗೋಳಶಾಸ್ತ್ರ ಪ್ರಬುದ್ಧವಾಗಿದೆ ಎಂಬುದಾಗಿ ವರಾಹಮಿಹಿರನು ಹೇಳಿದ್ದಾನೆ. ಖಗೋಳಶಾಸ್ತ್ರದ ಪರಿಗಣನೆಯಲ್ಲಿ ಭಾರತೀಯರು ಅನೇಕ ಸೂತ್ರಗಳನ್ನು, ಕಲ್ಪನೆಗಳನ್ನು ಗ್ರೀಕರಿಂದ ಕಲಿತರು. ಗ್ರಹಗಳ ಚಲನೆಗಳಲ್ಲಿ ಅವುಗಳ ಸ್ಥಾನಗಳನ್ನು ನಿರ್ಧರಿಸುವುದರಲ್ಲಿ ಹಲವಾರು ಪ್ರಯೋಗಗಳಲ್ಲಿ ಭಾರತೀಯ ಮತ್ತು ಗ್ರೀಕ್ ಖಗೋಳ ಶಾಸ್ತ್ರಜ್ಞರಲ್ಲಿ ಅನೇಕ ಸಾಮರಸ್ಯಗಳು ಕಂಡು ಬರುತ್ತವೆ. ಉದಾಹರಣೆಗೆ ವೃತ್ತ ವಿಭಜನೆ, ನಿಮಿಷಗಳು ಮತ್ತು ಸೆಕೆಂಡುಗಳ ಲೆಕ್ಕಾಚಾರಗಳಲ್ಲಿ ಎರಡೂ ಪದ್ಧತಿಗಳ ಲೆಕ್ಕಾಚಾರಗಳು ಒಂದೇ ಆಗಿರುವುದು ಕಂಡು ಬರುತ್ತದೆ.

ಅನೇಕ ಭಾರತೀಯ ಗಣಿತಶಾಸ್ತ್ರದ ಕಲ್ಪನೆಗಳು ಗ್ರೀಕರಿಂದ ಬಂದವುಗಳಾಗಿವೆ. ಟ್ರೆಪಿಸಿಯಂ ಪ್ರಯೋಗವನ್ನು ಹೆರಾನ್‌ನಿಂದಲೂ, ಪ್ರತಿಬಿಂಬದ ಪ್ರಯೋಗವನ್ನು ಥೇಲ್ಸ್ ನಿಂದಲೂ ಪಡೆದಿದ್ದುದಾಗಿ ಹೇಳಲಾಗಿದೆ. ಬ್ರಹ್ಮಗುಪ್ತನು ಚತುಷ್ಕೋಣದ ಬಲಕೋನವನ್ನು ಗ್ರೀಕರ ಮಾದರಿಯಿಂದ ಬಿಡಿಸಲಾಗಿದೆ ಎಂದು ಹೇಳುತ್ತಾನೆ.

### *51.6.5 ವೈದ್ಯಶಾಸ್ತ್ರ*

ವೈದ್ಯಶಾಸ್ತ್ರದಲ್ಲಿ ಭಾರತೀಯ ಮತ್ತು ಗ್ರೀಕರ ನಡುವೆ ಮಹತ್ತರವಾದ ಹಾಗೂ ನಿಖರವಾದ ಸಂಪರ್ಕ ಕಂಡು ಬರುತ್ತದೆ. ಗ್ರೀಕ್ ಬರಹಗಾರನಾದ ಅರೆಯನ್ ಅಲೆಗ್ಸಾಂಡರನ ಬಳಿ ನುರಿತ ಭಾರತೀಯ ವೈದ್ಯರಿದ್ದರು. ಅವರು ವಿಶೇಷವಾಗಿ ವಿಷಜಂತುಗಳು ಕಚ್ಚಿದವರನ್ನು ಅಲ್ಲದೆ, ಅನೇಕ ರೋಗಗಳಿಗೆ ಮತ್ತು ದೇಹದ ನೋವುಗಳಿಗೆ ಔಷಧಿಯನ್ನು ನೀಡಿ ಗುಣ ಪಡಿಸುತ್ತಿದ್ದರು. ಅಂತಹ ವಿಷಜಂತುವಿನ ರೋಗಿಗಳನ್ನು ಗುಣಪಡಿಸುವ ವಿದ್ಯೆ ಗ್ರೀಕ್ ವೈದ್ಯರಿಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾನೆ. ಭಾರತೀಯ ವೈದ್ಯರಿಂದ ಅನೇಕ ಹೊಸ ಔಷಧಿಗಳನ್ನು ಹಾಗೂ ಅವುಗಳ ಪ್ರಯೋಗಗಳನ್ನು ಗ್ರೀಕರು ಅರಿತರು. ಚಂದ್ರಗುಪ್ತ ಮೌರ್ಯನು ಕೆಲವು ಔಷಧಿಗಳನ್ನು ಸೆಲ್ಯೂಕಸ್ಸನಿಗೆ ಬಹುಮಾನವಾಗಿ ಕಳಿಸಿಕೊಟ್ಟನು. ಗಿರ್ನಾರ್‌ನಲ್ಲಿಯ ಅಶೋಕನ ಬಂಡೆ ಶಾಸನ, ಯೋನ ರಾಜನಾದ ಆಂಟಿಯೋಗ ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ವೈದ್ಯಕೀಯ ಉಪಚಾರಗಳನ್ನು ನಡೆಸುತ್ತಿದ್ದನು. ಅಲ್ಲದೆ ಅವನು ಹಲವಾರು ಔಷಧೀಯ ಸಸ್ಯಗಳನ್ನು ಬೆಳೆಸಿದ್ದನು ಎಂದು ತಿಳಿಸುತ್ತದೆ. ಭಾರತೀಯ ಔಷಧೀಯ ಸಸ್ಯಗಳಿಗೆ ಗ್ರೀಕರು ತತ್ಸಮಾನವಾದ ಹೆಸರುಗಳನ್ನು ಹುಡುಕಿಕೊಳ್ಳಲು ಪ್ರಯತ್ನಿಸಿದರು.

ಚರಕನ ಬೃಹತ್ ಗ್ರಂಥವಾದ ಚರಕ ಸಂಹಿತೆಯಲ್ಲಿ ಗ್ರೀಕ್ ವೈದ್ಯಕೀಯ ಕಲ್ಪನೆಗಳ ದೃಢವಾದ ಹೋಲಿಕೆ ಕಂಡು ಬರುತ್ತದೆ. ಟೀಸಿಯಸ್‌ನಿಗೂ ಬಹಳ ಹಿಂದೆ, ಡೆಮೊಕೆಡಿನ್ ಎಂಬ ಕ್ರಾಟನ್ ನಗರದ ಗ್ರೀಕ್ ವೈದ್ಯನನ್ನು ಉಲ್ಲೇಖಿಸುತ್ತಾ ಇತಿಹಾಸಕಾರ ಹೆರೋಡಟಸ್ ಅವನನ್ನು ಅಂದಿನ ಕಾಲದ ವೈದ್ಯರುಗಳಲ್ಲೆಲ್ಲಾ ಉತ್ತಮವಾದವನು ಎಂದು ಉಲ್ಲೇಖಿಸುತ್ತಾನೆ. ಚರಕನು ಕಾಶ್ಮೀರದವನಾಗಿದ್ದು, ಕಾನಿಷ್ಕನ ರಾಜವೈದ್ಯನಾಗಿದ್ದನು. ಆತನು ತನ್ನ ಸಂಹಿತದಲ್ಲಿ ವಾತ, ಪಿತ್ತ, ಕಫ ಮತ್ತು ರಕ್ತ ಈ ನಾಲ್ಕು ಮಾನವ ಶರೀರದ ಧಾತುಗಳು. ಈ ನಾಲ್ಕು ಧಾತುಗಳು ಮಾನವನ ಶರೀರಕ್ಕೆ ಬಹಳ ಮುಖ್ಯವಾಗಿ ಬೇಕಾದವು. ಅವುಗಳಲ್ಲಿ ಯಾವುದು ವ್ಯತ್ಯಾಸವಾದರೂ ಮಾನವನ ಶರೀರ ರೋಗಗಳಿಂದ ಬಳಲುತ್ತದೆ ಎಂದು ತಿಳಿಸಿದ್ದಾನೆ. ಹಿಪೋಕ್ರೆಟಿಸ್ ಮತ್ತು ಪ್ಲಾಟೋ ಎಂಬ ಗ್ರೀಕ್ ವೈದ್ಯಶಾಸ್ತ್ರಜ್ಞರು ರಕ್ತ, ಕಫ, ಕಪ್ಪು ಮತ್ತು ಹಳದಿ ಪಿತ್ತರಸ ಎಂಬ ನಾಲ್ಕು ಧಾತುಗಳು ಮಾನವನ ಆರೋಗ್ಯಕ್ಕೆ ಮುಖ್ಯ ಎಂದಿದ್ದಾನೆ. ಈ ನಾಲ್ಕು ಧಾತುಗಳು ಸಾಕಷ್ಟು ಪ್ರಮಾಣದಲ್ಲಿ ಸಮರ್ಪಕವಾಗಿ ಸ್ಫುರಿಸದಿದ್ದಾಗ ಮಾನವನ ಶರೀರದಲ್ಲಿ ರೋಗಗಳು ಕಾಣಿಸಿಕೊಳ್ಳುತ್ತವೆ ಎಂದು ಪ್ಲಾಟೋ ಅಭಿಪ್ರಾಯ ಪಡುತ್ತಾನೆ.

ಇಲ್ಲಿ ಬಹಳ ಪ್ರಮುಖವಾದ ಅಂಶವೆಂದರೆ ಈ ಕಾಲಕ್ಕಾಗಲೇ ವೈದ್ಯ ಸಮ್ಮೇಳನಗಳು ನಡೆಯುತ್ತಿದ್ದುದು. ಬಾಲ್ಕ್‌ನಲ್ಲಿ (ಬ್ಯಾಕ್ಟ್ರಿಯಾ) ನಡೆದ ಅಂತಹ ಒಂದು ವೈದ್ಯ ಸಮ್ಮೇಳನದಲ್ಲಿ ಚರಕನು ಭಾಗವಹಿಸಿದುದಾಗಿ ತಿಳಿದುಬರುತ್ತದೆ. ಚರಕನು ಭಾರತೀಯ ವೈದ್ಯರುಗಳಿಗೆ ಹೇಳಿರುವ ಕೆಲವು ನಿಯಮಗಳು ಗ್ರೀಕ್ ಪ್ರಸಿದ್ಧ ವೈದ್ಯನಾದ ಹಿಪೊಕ್ರೆಟಿಸ್‌ನು ಗೊತ್ತು ಪಡಿಸಿರುವ ಪ್ರತಿಜ್ಞೆಯನ್ನು ಹೋಲುತ್ತವೆ. ಹೀಗೆ ವೈದ್ಯಕೀಯ ಕ್ಷೇತ್ರದಲ್ಲಿ ಭಾರತ ಮತ್ತು ಗ್ರೀಕ್ ಕಲ್ಪನೆಗಳು, ರೀತಿ ನೀತಿಗಳು ಪರಸ್ಪರ ಬಹಳವಾಗಿ ಪ್ರಭಾವಗೊಂಡಿರುವುದನ್ನು ಕಾಣಬಹುದು.

### 51.6.6 ಸಾಹಿತ್ಯ

ಈಗ ಗ್ರೀಕ್ ಸಾಹಿತ್ಯದ ಪ್ರಭಾವ ಭಾರತದ ಸಾಹಿತ್ಯದ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎನ್ನುವುದನ್ನು ತಿಳಿಯೋಣ. ಗ್ರೀಕ್ ಲಿಪಿಯನ್ನು ಕುರಿತಂತೆ ಮೊಟ್ಟ ಮೊದಲ ಸಾಹಿತ್ಯದ ಉಲ್ಲೇಖ ಪತಾಂಜಲಿಯ ಕೃತಿಗಳಲ್ಲಿ ಕಂಡುಬರುತ್ತದೆ. ಪತಾಂಜಲಿಯು 'ಯವನಲಿಪಿ' ಎಂದು ಕರೆದಿದ್ದಾನೆ. ಕಾನಿಷ್ಕನ ನಾಣ್ಯಗಳಲ್ಲಿ ಕಂಡುಬರುವ ಅಂಕುಡೊಂಕಾದ ಗ್ರೀಕ್ ಬರಹಗಳು ದಿನನಿತ್ಯದ ಹಾಗೂ ವಾಣಿಜ್ಯ ಭಾಷೆಗೆ ತಕ್ಕವುಗಳಾಗಿ ಕಂಡುಬರುತ್ತವೆ. 1957 ರಲ್ಲಿ ದೊರೆತಿರುವ ಗ್ರೀಕ್ ಬರಹಗಳುಳ್ಳ ಶಾಸನವು ಹುವಿಷ್ಕನ ಕಾಲಕ್ಕೆ ಸೇರಿದ್ದೆಂದು ಹೇಳಲಾಗಿದೆ. ಗ್ರೀಕ್ ಭಾಷೆಗೂ ಮತ್ತು ಗ್ರೀಕ್ ಲಿಪಿಗೂ ಸಾಮ್ಯ ಕಂಡುಬರುವುದಿಲ್ಲ. ಅನೇಕ ಸಂಸ್ಕೃತ ಶಬ್ದಗಳ ಮೂಲೋತ್ಪತ್ತಿ ಗ್ರೀಕ್ ಪದಗಳಿಂದ ಬಂದಿವೆ. ಉದಾಹರಣೆಗೆ ಪೆನ್, ಇಂಕ್, ಟ್ಯಾಬಲೆಟ್, ಪ್ಲೇಕ್, ಇತ್ಯಾದಿ. ಗ್ರೀಕರು ಭಾರತಕ್ಕೆ ಚರ್ಮ ಕಾಗದವನ್ನು ತಂದರೆಂದು ಹೇಳಲಾಗಿದೆ. ಹಲವು ಭಾರತೀಯ ವಿದ್ವಾಂಸರು ಗ್ರೀಕ್ ಗ್ರಂಥಗಳಿಂದ ಮತ್ತು ಭಾಷಾಂತರಗಳಿಂದ ಜ್ಞಾನವನ್ನು ಪಡೆದುಕೊಂಡರು ಎಂದು ತಿಳಿದು ಬರುತ್ತದೆ. ಹೋಮರನ ಕಾವ್ಯಗಳು ಭಾರತೀಯರಲ್ಲಿ ಜನಪ್ರಿಯತೆಯನ್ನು ಗಳಿಸಿದ್ದವು. ತರುವಾಯ ಹೋಮರನ ಪದ್ಯಗಳನ್ನು ಭಾರತೀಯರು ಹಾಡುತ್ತಿದ್ದರು. ಹಾಗೂ ಅವುಗಳನ್ನು ಭಾರತೀಯ ಭಾಷೆಗೆ ತರ್ಜುಮೆ ಮಾಡಲಾಯಿತು. ಗ್ರೀಕರು ಜಾನಪದವನ್ನು ಭಾರತೀಯರಿಂದ ಕಲಿತರು. ಅಲ್ಲದೆ ಪಂಚತಂತ್ರ ಕಥೆಗಳಲ್ಲಿ ಬರುವ ಅನೇಕ ಪ್ರಾಣಿಗಳ ಕಥೆಗಳನ್ನು ಗ್ರೀಕ್ ಭಾಷೆಗೆ ತರ್ಜುಮೆ ಮಾಡಿಕೊಂಡರು.

### 51.6.7 ನಾಟಕ

ನಾಟಕ ಕಲೆಯಲ್ಲಿ ಭಾರತೀಯರಿಗೂ, ಗ್ರೀಕರಿಗೂ ಸಂಬಂಧ ಹೆಚ್ಚಾಗಿಯೇ ಕಂಡು ಬರುತ್ತದೆ. ಅಲೆಗ್ಸಾಂಡರನು ತನ್ನ ಸಾಮ್ರಾಜ್ಯದ ಬಹುಭಾಗಗಳಲ್ಲಿ ಗ್ರೀಕ್ ನಟರು ಮತ್ತು ಸಂಗೀತಗಾರರನ್ನು ಪರಿಚಯಿಸಿದನು. ರಂಗಮಂದಿರ, ರಂಗ ನಾಟಕಗಳು ಭಾರತೀಯರಿಗೆ ಗ್ರೀಕರಿಂದ ಪರಿಚಯವಾಯಿತು. ಭಾರತದಲ್ಲಿ ಮೊಟ್ಟಮೊದಲಿಗೆ ಕಂಡುಬರುವ ಮುಕ್ತ ರಂಗಮಂದಿರದ ದೃಶ್ಯ ಸೀತಾಭಂಗ ಗುಹೆಗಳಲ್ಲಿದೆ. ಭಾರತದ ಪ್ರಸಿದ್ಧ ಕವಿಯಾದ ಕಾಳಿದಾಸನು ಗುಹಾರಂಗ ಮಂದಿರಗಳು, ನಾಟ್ಯಶಾಲೆ, ಪ್ರೇಕ್ಷಾಗೃಹಗಳನ್ನು ತನ್ನ ಕಾವ್ಯಗಳಲ್ಲಿ ಉಲ್ಲೇಖಿಸಿದ್ದಾನೆ. ಭರತನ ನಾಟ್ಯ ಶಾಸ್ತ್ರದಲ್ಲಿಯೂ ಗುಹಾರಂಗ ಮಂದಿರಗಳ ಉಲ್ಲೇಖವಿದೆ. ಭಾರತೀಯ ನಾಟಕಗಳಲ್ಲಿ ಕಂಡುಬರುವ ರಂಗಸ್ಥಳದ ಹಿನ್ನೆಲೆಗಾಗಿ ಉಪಯೋಗಿಸುವ ಪರದೆಯನ್ನು ಯವನಿಕಾ ಎನ್ನುತ್ತಾರೆ. ಈ ಯವನಿಕಾ ಎಂಬುವ ಪದ ಗ್ರೀಕರಿಂದ ಬಂದದ್ದಾಗಿದೆ. ರಂಗಸ್ಥಳದ ಕಲ್ಪನೆಯೂ ಕೂಡ ಗ್ರೀಕರಿಂದ ಭಾರತೀಯರು ಪಡೆದುಕೊಂಡರೆನ್ನುವುದಕ್ಕೆ ಪುರಾವೆಯಿದೆ. ಅರಿಸ್ಟಾಟಲನು ಗ್ರೀಕ್ ನಾಟಕಗಳಲ್ಲಿ ಹೆಸರಿಸಿರುವ ಮುಖಸ್ತುತಿಕಾರರನ್ನು ಭರತನು ವಿಟನೆಂದು ಹೆಸರಿಸುತ್ತಾನೆ. ಭಾರತೀಯ ನಾಟಕದ ಸ್ವರೂಪ ಮತ್ತು ಗುಣಗಳು ಗ್ರೀಕರಿಂದ ಪ್ರಭಾವಿತಗೊಂಡಿವೆ. ಭಾರತದಲ್ಲಿ ಸಂಸ್ಕೃತ ನಾಟಕಗಳು ಗ್ರೀಕರಿಂದ ಪ್ರಭಾವಿತಗೊಂಡು ಪುಷ್ಟಿಗೊಂಡವು. ಪಾಣಿನಿಯು ತನ್ನ ಗ್ರಂಥದಲ್ಲಿ ಸ್ವಲ್ಪಮಟ್ಟಿನ ನಟನೆ ಮತ್ತು ನಾಟ್ಯದ ಭಂಗಿಗಳನ್ನು ಮೊಟ್ಟಮೊದಲಿಗೆ ಉಲ್ಲೇಖಿಸುತ್ತಾನೆ. ಪತಾಂಜಲಿಯು ನಟರ ತರಬೇತಿ ಶಾಲೆಗಳನ್ನು ಹಾಗೂ ವಾದ್ಯಗಳನ್ನು ನುಡಿಸುವ ಶಾಲೆಗಳನ್ನು ಉಲ್ಲೇಖಿಸಿದ್ದಾನೆ. ಭಾರತೀಯ ನಾಟಕ, ರಂಗಶಾಲೆ, ರಂಗ ಮಂದಿರ, ಮೊದಲಾದವುಗಳ ಮೇಲೆ ಗ್ರೀಕರ ಹೆಚ್ಚಿನ ಪ್ರಭಾವವನ್ನು ಕಾಣಬಹುದು.

### *51.6.8 ನಾಣ್ಯಗಳು*

ಭಾರತೀಯ ನಾಣ್ಯ ಪರಂಪರೆಯಲ್ಲಿ ಗ್ರೀಕ್ ಪ್ರಭಾವವನ್ನು ನಿಚ್ಚಳವಾಗಿ ಗುರುತಿಸಬಹುದು. ಕ್ಷತ್ರಪರ ನಾಣ್ಯಗಳ ಮಾದರಿಯನ್ನು ಪಂಜಾಬ್‌ನಲ್ಲಿದ್ದ ಗ್ರೀಕ್ ರಾಜರುಗಳು ಅನುಸರಿಸಿದರು. ಶಕರ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳ ಮೇಲೆ ಗ್ರೀಕ್ ದೇವತೆಗಳನ್ನು ಕಾಣಬಹುದು. ಭಾರತದ ನಾಣ್ಯಗಳು ಪಂಚ್‌ಮಾರ್ಕ್ ನಾಣ್ಯಗಳಾಗಿದ್ದವು. ಎರಡು ಮುಖಗಳನ್ನುಳ್ಳ ನಾಣ್ಯಗಳು, ರಾಜನ ಮುಖಚಿತ್ರ, ಬಿರುದುಗಳು, ಪ್ರಾಣಿಗಳ ಚಿತ್ರ ಇವುಗಳನ್ನು ನಾಣ್ಯಗಳಲ್ಲಿ ಹಾಕಿಸುವುದನ್ನು ಭಾರತೀಯರು ಗ್ರೀಕರಿಂದ ಕಲಿತರು.

## 51.7 ಘಟಕದ ಸಾರಾಂಶ

ಪರ್ಶಿಯನ್ ಮತ್ತು ಗ್ರೀಕರ ದಾಳಿಗಳಿಂದ ರಾಜಕೀಯವಾಗಿ ಉಂಟಾದ ನಷ್ಟಕ್ಕಿಂತಲೂ ಸಾಂಸ್ಕೃತಿಕವಾಗಿ ಪರಸ್ಪರ ಎರಡು ದೇಶಗಳು ಪಡೆದುಕೊಂಡದ್ದು ಬಹಳ ಪ್ರಮುಖವಾದದ್ದು. ಈ ವಿದೇಶಿ ದಾಳಿಗಳಿಂದ ಭಾರತದ ಇತಿಹಾಸದ ಮೇಲೆ ಮಹತ್ತರ ಪರಿಣಾಮಗಳುಂಟಾದವು. ಮೊದಲಿಗೆ ಭಾರತಕ್ಕೆ ಪಾಶ್ಚಿಮಾತ್ಯ ದೇಶದ ಜನರ ನೇರ ಸಂಪರ್ಕವುಂಟಾಯಿತು. ಅವರ ಸಾಂಸ್ಕೃತಿಕ, ರೀತಿ ನೀತಿಗಳಿಂದ ಪ್ರಭಾವಿತಗೊಂಡ ಭಾರತೀಯರು ತಮಗೆ ಗೊತ್ತಿಲ್ಲದಿದ್ದುದನ್ನು ಅವರಿಂದ ಕಲಿತರು. ಇದರಿಂದ ಭಾರತದ ಭೌಗೋಳಿಕ ಮತ್ತು ಸಾಂಸ್ಕೃತಿಕ ಎಲ್ಲೆಯನ್ನು ಭಾರತದಾಚೆಗೂ ವಿಸ್ತರಿಸಿದಂತಾಯಿತು. ಭಾರತೀಯರು ಹೊಸ ಜ್ಞಾನವನ್ನು ಪಡೆದುಕೊಂಡರು. ಭಾರತ ಪಾಶ್ಚಾತ್ಯ ದೇಶಗಳೊಡನೆ ಉತ್ತಮ ರೀತಿಯ ವ್ಯಾಪಾರ ಸಂಪರ್ಕಗಳನ್ನು ಸ್ಥಾಪಿಸುವುದರೊಂದಿಗೆ ಅಪಾರವಾದ ಜ್ಞಾನ ಸಂಪರ್ಕವನ್ನು ಪಡೆದುಕೊಂಡಿತು. ಕಾಲಗಣನೆ, ಖಗೋಳಶಾಸ್ತ್ರ, ತತ್ವಶಾಸ್ತ್ರ, ವೈದ್ಯಶಾಸ್ತ್ರ, ಸಾಹಿತ್ಯ, ನಾಟಕ, ನಾಣ್ಯಗಳು ಮೊದಲಾದ ಎಲ್ಲಾ ಕ್ಷೇತ್ರಗಳಲ್ಲೂ ಹೊಸ ಹೊಸ ವಿಷಯಗಳಿಂದ ಎರಡೂ ದೇಶಗಳು ಪರಸ್ಪರ ಲಾಭ ಪಡೆದವು.

## 51.8 ಅಭ್ಯಸನೀಯ ಗ್ರಂಥಗಳು


1. Majumdar .R.C. : **Ancient India**
2. Luniya .B.N. : **Evolution of Indian Culture**
3. ಪ್ರೊ. ಜಿ.ಆರ್. ರಂಗಸ್ವಾಮಯ್ಯ : **ಪ್ರಾಚೀನ ಭಾರತ**
4. ವೈ. ಗುರುರಾಜಾರಾವ್ : **ಅರ್ವಾಚೀನ ಭಾರತ**
5. ಪ್ರೊ. ಆರ್. ಜಿ. ಶಿವಣ್ಣ : **ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ಸಮೀಕ್ಷೆ**


## 51.9 ಸ್ವಂತ ಅಭ್ಯಾಸಕ್ಕೆ

1) ಭಾರತೀಯ ಸಂಸ್ಕೃತಿಯ ಮೇಲೆ ಪರ್ಶಿಯನ್ನರ ದಾಳಿಯಿಂದಾದ ಪ್ರಭಾವವನ್ನು ವಿವರಿಸಿ.

2) ಭಾರತೀಯ ಸಂಸ್ಕೃತಿಯ ಮೇಲೆ ಗ್ರೀಕರ ದಾಳಿಯಿಂದಾದ ಪರಿಣಾಮವನ್ನು ತಿಳಿಸಿ.

**ಡಾ. ಎಂ. ಸುಶೀಲಾ ಅರಸ್**

# ಟಿಪ್ಪಣಿಗಳು

# ಘಟಕ - 52

## ಕುಶಾನರ ಆಳ್ವಿಕೆ - ಕಾನಿಷ್ಕ - ಕಲೆ ಮತ್ತು ಸಂಸ್ಕೃತಿಗಳಿಗೆ ಕುಶಾನರ ಕೊಡುಗೆಗಳು


**52.0** ರಚನೆ

**52.1** ಉದ್ದೇಶಗಳು

**52.2** ಪೀಠಿಕೆ

**52.3** ಕುಶಾನರ ರಾಜಕೀಯ ಇತಿಹಾಸ

- **52.3.1** ಒಂದನೇ ಕಾಡ್‌ಫಿಸಿಸ್
- **52.3.2** ಎರಡನೇ ಕಾಡ್‌ಫಿಸಿಸ್
- **52.3.3** ಕಾನಿಷ್ಕ

**52.4** ಕುಶಾನರ ಕೊಡುಗೆಗಳು

- **52.4.1** ಧರ್ಮ
- **52.4.2** ನಾಲ್ಕನೇ ಬೌದ್ಧ ಸಮ್ಮೇಳನ
- **52.4.3** ಮಹಾಯಾನ ಬೌದ್ಧ ಪಂಥದ ಲಕ್ಷಣಗಳು
- **52.4.4** ಮಹಾಯಾನ ಬೌದ್ಧ ಪಂಥದ ಹರಡುವಿಕೆ

**52.5** ಕುಶಾನರ ಕಾಲದಲ್ಲಿ ಸಾಹಿತ್ಯದ ಬೆಳವಣಿಗೆ

**52.6** ಕಲೆ : ಗಾಂಧಾರ ಶೈಲಿ

- **52.6.1** ಗಾಂಧಾರ ಕಲೆಯ ಹುಟ್ಟು ಮತ್ತು ಬೆಳವಣಿಗೆ
- **52.6.2** ಗಾಂಧಾರ ಕಲೆಯ ಲಕ್ಷಣಗಳು
- **52.6.3** ಗಾಂಧಾರ ಕಲೆಯ ವಸ್ತುವಿಷಯ
- **52.6.4** ಮಥುರಾ ಶೈಲಿ
- **52.6.5** ಅಮರಾವತಿ ಶೈಲಿ

**52.7** ಕುಶಾನರ ವಾಸ್ತುಶಿಲ್ಪ

**52.8** ಕುಶಾನರ ನಾಣ್ಯಗಳು

**52.9** ಘಟಕದ ಸಾರಾಂಶ

**52.10** ಅಭ್ಯಸನೀಯ ಗ್ರಂಥಗಳು

**52.11** ಸ್ವಂತ ಅಭ್ಯಾಸಕ್ಕೆ

## 52.1 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನೀವು ಈ ಕೆಳಕಂಡ ಅಂಶಗಳನ್ನು ಅರ್ಥಮಾಡಿಕೊಳ್ಳುವಿರಿ.

* ಮೌರ್ಯರ ಅವನತಿಯ ನಂತರ ಉತ್ತರ ಭಾರತದ ರಾಜಕೀಯ ಪರಿಸ್ಥಿತಿ.
* ಕುಶಾನರ ಏಳಿಗೆ, ಪ್ರಮುಖ ದೊರೆ ಕಾನಿಷ್ಕ - ರಾಜ್ಯ ವಿಸ್ತರಣೆ
* ಬೌದ್ಧ ಧರ್ಮದ ಮತ್ತೊಂದು ಶಾಖೆಯಾದ ಮಹಾಯಾನ ಪಂಥದ ಉಗಮ, ಬೆಳವಣಿಗೆ, ಮಹಾಯಾನ ಬೌದ್ಧ ಪಂಥಕ್ಕೆ ಕಾನಿಷ್ಕನ ಉತ್ತೇಜನ, ನಾಲ್ಕನೇ ಬೌದ್ಧ ಮಹಾ ಸಮ್ಮೇಳನ, ಮಹಾಯಾನ ಬೌದ್ಧ ಪಂಥದ ಪ್ರಸಾರ
* ಸಂಸ್ಕೃತ ಸಾಹಿತ್ಯದ ಬೆಳವಣಿಗೆ - ಕಾನಿಷ್ಕನ ಪುರಸ್ಕಾರ - ಶ್ರೇಷ್ಠ ಗ್ರಂಥಗಳ ರಚನೆ
* ಗಾಂಧಾರ ಶೈಲಿಯ ಕಲೆ, ನೂತನ ಕಲಾ ವಿನ್ಯಾಸ, ಬುದ್ಧ ಮತ್ತು ಬೋಧಿಸತ್ವರ ವಿಗ್ರಹಗಳು, ಮಥುರಾ ಶೈಲಿಯೆಂಬ ಮತ್ತೊಂದು ಶೈಲಿಗೂ ಪ್ರೋತ್ಸಾಹ ಹಾಗೂ ಬೆಳವಣಿಗೆ

## 52.2 ಪೀಠಿಕೆ

ಕುಶಾನರ ಆಳ್ವಿಕೆ ಭಾರತದ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲು. ಮೌರ್ಯ ಸಾಮ್ರಾಜ್ಯದ ಅವನತಿಯ ನಂತರ ಭಾರತದಲ್ಲಿ ತಲೆಯೆತ್ತಿದ ಮತ್ತೊಂದು ದೊಡ್ಡ ಸಾಮ್ರಾಜ್ಯ. ಕುಶಾನರು ಯೂ.ಚಿ. ಬುಡಕಟ್ಟಿಗೆ ಸೇರಿದವರಾಗಿದ್ದು, ಆಧುನಿಕ ಚೀನಾದ ಗಡಿಯಲ್ಲಿ ನೆಲೆಸಿದ್ದರು. ಇವರು ಭಾರತದ ಕಡೆ ಮುಂದುವರಿದು, ಮೌರ್ಯರ ನಂತರ ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿ ಆಳ್ವಿಕೆ ನಡೆಸುತ್ತಿದ್ದ ಶಕರನ್ನು ಸೋಲಿಸಿ, ಅವರ ಆಡಳಿತ ಪ್ರದೇಶಗಳನ್ನು ವಶಪಡಿಸಿಕೊಂಡು ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದರು. ಕ್ರಿ.ಶ. ಒಂದನೇ ಶತಮಾನದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದ ಕುಶಾನರು ಸುಮಾರು 175 ವರ್ಷಗಳ ಕಾಲ ರಾಜ್ಯವಾಳಿದರು. ಭಾರತದಲ್ಲಿ ಕುಶಾನರ ಸ್ಥಾಪನೆಗೆ ಒಂದನೇ ಕಾಡ್‌ಫೆಸಿಸ್‌ನು ಬುನಾದಿ ಹಾಕಿದನು. ಈತನು ವಾಯುವ್ಯ ಭಾರತದಲ್ಲಿ ಆಳುತ್ತಿದ್ದ ಶಕರನ್ನು ಸೋಲಿಸಿ ಗಾಂಧಾರ ಮತ್ತು ಕಾಬೂಲ್‌ಗಳನ್ನು ವಶಪಡಿಸಿಕೊಂಡು ತನ್ನ ಆಳ್ವಿಕೆಯನ್ನು ಆ ಪ್ರದೇಶಗಳ ಮೇಲೆ ಸ್ಥಾಪಿಸಿದನು. ಈತನು ಮತ್ತೆ ಮುಂದುವರಿದು ಇಂಡೋ ಗ್ರೀಕರನ್ನು ಮತ್ತು ಇಂಡೋ ಪಾರ್ಥಿಯನ್ನರನ್ನು ಎದುರಿಸಿ, ತನ್ನ ಅಧಿಕಾರವನ್ನು ಜೀಲಂ ನದಿಯವರೆಗೂ ವಿಸ್ತರಿಸಿದನು. ಇವನ ನಂತರ ಇವನ ಮಗ ಎರಡನೆಯ ಕಾಡ್‌ಫೆಸಿಸ್‌ನು ಉತ್ತರ ಭಾರತದಲ್ಲಿ ತನ್ನ ಅಧಿಕಾರವನ್ನು ಭದ್ರಪಡಿಸಿಕೊಂಡಿದ್ದಲ್ಲದೆ, ಉತ್ತಮ ಆಡಳಿತವನ್ನು ರೂಪಿಸಿದನು.

ಕುಶಾನ ಮನೆತನದಲ್ಲಿ ಮತ್ತೊಬ್ಬ ಪ್ರಸಿದ್ಧ ರಾಜನೆಂದರೆ ಕಾನಿಷ್ಕ. ಈತನು ಕ್ರಿ.ಶ. 78 ರಲ್ಲಿ ಶಕಯುಗವನ್ನು ಸ್ಥಾಪಿಸಿದನು. ಕಾನಿಷ್ಕನು ಸಿಂಹಾಸನಾರೂಢನಾದ ಕಾಲದಲ್ಲಿ ಕುಶಾನ ಸಾಮ್ರಾಜ್ಯವು ಆಫ್ಘಾನಿಸ್ತಾನ, ಸಿಂಧ್, ಪಾರ್ಥಿಯಾ, ಬ್ಯಾಕ್ಟ್ರಿಯಾ ಮತ್ತು ಪಂಜಾಬ್‌ಗಳ ಕೆಲವು ಪ್ರದೇಶಗಳನ್ನು ಹೊಂದಿತ್ತು. ತನ್ನ ಸಾಮ್ರಾಜ್ಯದ ಮಧ್ಯ ಭಾಗದಲ್ಲಿದ್ದ ಪೆಶಾವರ ಅಥವಾ ಪುರುಷಪುರವನ್ನು ಕಾನಿಷ್ಕನು ರಾಜಧಾನಿಯನ್ನಾಗಿ ಮಾಡಿಕೊಂಡನು.

ಕಾನಿಷ್ಕ ತನ್ನ ಸಾಮ್ರಾಜ್ಯಕ್ಕೆ ದಕ್ಷ ಆಡಳಿತವನ್ನು ಕೊಟ್ಟಿದುದಲ್ಲದೆ ಕಲೆ, ಸಾಹಿತ್ಯ, ಧರ್ಮಕ್ಕೂ ಪ್ರೋತ್ಸಾಹ ನೀಡಿದನು. ಈತನ ಪ್ರೋತ್ಸಾಹದಿಂದ ಉತ್ತಮ ಮಟ್ಟದ ಸಂಸ್ಕೃತ ಸಾಹಿತ್ಯ ಸೃಷ್ಟಿಯಾಯಿತು. ಕಾನಿಷ್ಕನ ಕಾಲದಲ್ಲಿ ಬೌದ್ಧ ಧರ್ಮವು ಎರಡು ಶಾಖೆಗಳಾಗಿ ಒಡೆದು ಮಹಾಯಾನ ಪಂಥಕ್ಕೆ ಕುಶಾನರಿಂದ ಹೆಚ್ಚಿನ ಪ್ರೋತ್ಸಾಹ ದೊರಕಿತು. ಮಹಾಯಾನ ಬೌದ್ಧ ಪಂಥವು ಭಾರತದ

ಗಡಿಯಾಚೆಗೂ ಹರಡುವಂತಾಯಿತು. ಹಾಗೆಯೇ ಕಲಾ ಕ್ಷೇತ್ರದಲ್ಲಿ ಪ್ರಸಿದ್ಧವಾದ ಗಾಂಧಾರ ಕಲೆಗೆ ಕಾನಿಷ್ಕನಿಂದ ಪ್ರೋತ್ಸಾಹ ದೊರೆತು ಭಾರತೀಯ ಕಲೆಗಳಲ್ಲಿ ಪ್ರಮುಖವೆನಿಸಿತು. ಅಷ್ಟೇ ಅಲ್ಲದೆ, ಕುಶಾನರ ಆಳ್ವಿಕೆಯಲ್ಲಿ ಭಾರತೀಯ ಸಂಸ್ಕೃತಿ ಮಧ್ಯ ಏಷ್ಯಾ ಮತ್ತು ಪೂರ್ವ ಏಷ್ಯಾಗಳಿಗೆ ಪ್ರವಹಿಸುವಂತಾಯಿತು. ವ್ಯಾಪಾರ ಮತ್ತು ವಾಣಿಜ್ಯಗಳು ಅಭಿವೃದ್ಧಿ ಹೊಂದಿ, ಭಾರತದ ಸರಕುಗಳು ಚೀನಾ, ಪರ್ಶಿಯಾ ಮತ್ತು ರೋಮನ್ ಸಾಮ್ರಾಜ್ಯಗಳಲ್ಲೂ ಹೆಚ್ಚಿನ ಬೇಡಿಕೆಯನ್ನು ಹೊಂದಿದವು.

## 52.3 ಕುಶಾನರ ರಾಜಕೀಯ ಇತಿಹಾಸ

ಕುಶಾನರ ಇತಿಹಾಸವನ್ನು ತಿಳಿಯಲು ಹೆಚ್ಚಿನ ಸಂಖ್ಯೆಯಲ್ಲಿ ದೊರಕುವ ಶಾಸನಗಳು, ನಾಣ್ಯಗಳು, ಚೀನಾದ ರಾಯಭಾರಿಗಳು, ಹುಯನ್‌ತ್ಸಾಂಗನ ಬರಹಗಳು ಸಹಾಯಕಾರಿಯಾಗಿವೆ. ಇಂತಹ ಹಲವು ಮಾಹಿತಿಗಳನ್ನು ಆಧರಿಸಿ, ಇತಿಹಾಸಕಾರರು ಕುಶಾನರ ಇತಿಹಾಸವನ್ನು ಪುನರ್ ರಚಿಸಿದ್ದಾರೆ. ಮೌರ್ಯ ಸಾಮ್ರಾಜ್ಯದ ಪತನದ ನಂತರ ಉತ್ತರ ಭಾರತದಲ್ಲಿ ಬಹಳ ಕಾಲ ದೊಡ್ಡ ಸಾಮ್ರಾಜ್ಯಗಳು ಉದಯಿಸಲಿಲ್ಲ. ಸಣ್ಣ ಪುಟ್ಟ ರಾಜ್ಯಗಳಾದ ಶುಂಗ, ಕಣ್ವ, ಶಕ, ಇವುಗಳು ಮೌರ್ಯ ಸಾಮ್ರಾಜ್ಯದ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡು ತಮ್ಮ ಆಳ್ವಿಕೆಯನ್ನು ನಡೆಸುತ್ತಿದ್ದವು. ಕುಶಾನರು ಮಧ್ಯ ಏಷ್ಯಾದ ಪ್ರಸಿದ್ಧ ಯೂ.ಚಿ. ಬುಡಕಟ್ಟಿಗೆ ಸೇರಿದವರು. ಅವರಲ್ಲಿ ಪ್ರಮುಖವಾದ ಕುಜಲಕಾಡ್‌ಫಿಸಿಸ್‌ನು ಯೂ.ಚಿ. ಬುಡಕಟ್ಟಿಗೆ ಸೇರಿದ ಐದು ಪಂಗಡಗಳನ್ನು ಒಟ್ಟುಗೂಡಿಸಿ, ಭಾರತದ ಕಡೆ ಹೊರಡುವಂತೆ ಪ್ರೇರೆಪಿಸಿದನು. ತತ್ಪರಿಣಾಮವಾಗಿ, ಯೂಚಿ ಜನಾಂಗವು ಪ್ರಬಲರಾದುದಲ್ಲದೆ ಶಕರನ್ನು ಸೋಲಿಸಿ, ಕ್ರಿ.ಶ. ಒಂದನೇ ಶತಮಾನದಲ್ಲಿ ಕಾಬೂಲ್ ಮತ್ತು ಕಾಶ್ಮೀರವನ್ನು ವಶಪಡಿಸಿಕೊಂಡು, ಅಲ್ಲಿ ಕುಜಲ ಕಾಡ್‌ಫಿಸಿಸ್‌ನು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದನು.

### *52.3.1 ಒಂದನೇ ಕಾಡ್‌ಫಿಸಿಸ್*

ಒಂದನೇ ಕಾಡ್‌ಫಿಸಿಸ್ ಅಥವಾ ಕುಜಲ ಕಾಡ್‌ಫಿಸಿಸ್ ಕುಶಾನರಲ್ಲಿ ಮೊದಲ ರಾಜ. ಒಂದನೇ ಕಾಡ್‌ಫಿಸಿಸ್‌ನು ತನ್ನ ಬುಡಕಟ್ಟಿನ ಜನರನ್ನು ತನ್ನ ಕಡೆ ವಶಪಡಿಸಿಕೊಂಡು ಏಕೈಕ ನಾಯಕನೆನಿಸಿಕೊಂಡನು. ಈತನು ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಇಂಡೋ ಗ್ರೀಕರು ಮತ್ತು ಇಂಡೋ ಪಾರ್ಥಿಯನ್ನರನ್ನು ಜಯಿಸಿ, ತನ್ನ ಸಾಮ್ರಾಜ್ಯವನ್ನು ಪರ್ಶಿಯಾದ ಗಡಿಯಿಂದ ಸಿಂಧೂ ನದಿಯವರೆಗೆ ವಿಸ್ತರಿಸಿದನು. ಕಾಡ್‌ಫಿಸಿಸನು ಹಲವು ತಾಮ್ರದ ನಾಣ್ಯಗಳನ್ನು ಮುದ್ರಿಸಿದನು. ಈತನ ನಾಣ್ಯಗಳ ಒಂದು ಮುಖದಲ್ಲಿ ಗ್ರೀಕ್ ದೊರೆ ಹರ್‌ಮಾಯಿಸ್‌ನ ಹೆಸರನ್ನು ಮತ್ತು ಮತ್ತೊಂದು ಮುಖದಲ್ಲಿ ಕಾಡ್‌ಫಿಸಿಸ್‌ನ ಹೆಸರನ್ನು ಕೆತ್ತಿಸಲಾಗಿದೆ. ಇದರಿಂದ ಕುಜಲ ಕಾಡ್‌ಫಿಸಿಸ್‌ನು ಗ್ರೀಕರ ಸಾಮಂತನಾಗಿದ್ದನೆಂದೂ, ಗ್ರೀಕ್ ದೊರೆಯ ಸಹಾಯದಿಂದ ತನ್ನದೇ ಬುಡಕಟ್ಟಿನ ಇತರ ನಾಲ್ಕು ಬಣಗಳನ್ನು ಸದೆಬಡಿದು, ತಾನು ಮುಖಂಡನಾಗಲು ಕಾರಣವಾಯಿತೆಂದು ತಿಳಿದುಬರುತ್ತದೆ.

### *52.3.2 ಎರಡನೆಯ ಕಾಡ್‌ಫಿಸಿಸ್*

ಮೊದಲನೆಯ ಕಾಡ್‌ಫಿಸಿಸ್‌ನ ನಂತರ ಅವನ ಮಗನಾದ ಎರಡನೆ ಕಾಡ್‌ಫಿಸಿಸ್ ಕುಶಾನರ ಉತ್ತರಾಧಿಕಾರಿಯಾದನು. ಈತನ ನಾಣ್ಯಗಳಲ್ಲಿ ಈತನನ್ನು ವಿಮಾ ಕಾಡ್‌ಫಿಸಿಸ್ ಎಂಬುದಾಗಿ ಕೆತ್ತಲ್ಪಟ್ಟಿದೆ. ವಿಮಾ ಕಾಡ್‌ಫಿಸಿಸ್‌ನು ತನ್ನ ರಾಜ್ಯವನ್ನು ಬನಾರಸ್‌ನಿಂದ ಪಾರ್ಥಿಯಾದ ಗಡಿಯವರೆಗೂ ವಿಸ್ತರಿಸಿದನು. ತಾನು ಗೆದ್ದ ಪ್ರದೇಶಗಳ ಮೇಲ್ವಿಚಾರಣೆಗಾಗಿ ಒಬ್ಬ ಮಿಲಿಟರಿ ವೈಸರಾಯ್‌ನನ್ನು ನೇಮಿಸಿದನು. ಚೀನಾದ ಸೈನ್ಯ ಜನರಲ್ ವಾನ್ ಚಾವ್ ಎಂಬುವನ ನೇತೃತ್ವದಲ್ಲಿ ಭಾರತದ ಗಡಿಯೆಡೆಗೆ ಮುಂದುವರಿಯಿತು. ಎರಡನೆಯ ಕಾಡ್‌ಫಿಸಿಸನು ಚೀನಾದ ಸೈನ್ಯದೊಂದಿಗೆ

ಯುದ್ಧ ಮಾಡಲು ತನ್ನ ಸೈನ್ಯವನ್ನು ಕಳುಹಿಸಿದನು. ಆದರೆ ಕುಶಾನರ ಸೇನೆ ಚೀನಾ ಸೈನಿಕರ ಮೇಲೆ ವಿಜಯವನ್ನು ಸಾಧಿಸಲಾರದೆ ಸೋತು ಹೋಯಿತು. ಕಾಡ್‌ಫಿಸಿಸ್ ಸೋಲನ್ನು ಒಪ್ಪಿಕೊಂಡು ಚೀನಾಕ್ಕೆ ಕಪ್ಪಕಾಣಿಕೆಗಳನ್ನು ನೀಡಿದನು.

ಎರಡನೆಯ ಕಾಡ್‌ಫಿಸಿಸ್‌ನ ಕಾಲದಲ್ಲಿ ಭಾರತ ತನ್ನ ನೆರೆಹೊರೆಯ ದೇಶಗಳೊಂದಿಗೆ ಉತ್ತಮ ವಾಣಿಜ್ಯ ಸಂಪರ್ಕವನ್ನು ಸ್ಥಾಪಿಸಿತು. ಭಾರತದ ಸರಕುಗಳಾದ ರೇಷ್ಮೆ, ಸಾಂಬಾರ ಪದಾರ್ಥಗಳು ಮತ್ತು ಬೆಲೆಬಾಳುವ ಹರಳುಗಳನ್ನು ಚೈನಾ ಮತ್ತು ರೋಮನ್ ಸಾಮ್ರಾಜ್ಯಕ್ಕೆ ರಫ್ತು ಮಾಡಲಾಗುತ್ತಿತ್ತು. ಮೇಲಿನ ಭಾರತೀಯ ಸರಕುಗಳಿಗೆ ಬದಲಾಗಿ ರೋಮ್‌ನಿಂದ ಭಾರತಕ್ಕೆ ಅಪಾರವಾದ ಚಿನ್ನ ಬರುತ್ತಿತ್ತು. ಎರಡನೆಯ ಕಾಡ್‌ಫಿಸಿಸ್‌ನು ಅನೇಕ ಚಿನ್ನ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಈ ನಾಣ್ಯಗಳಲ್ಲಿ ಕಾಡ್‌ಫಿಸಿಸ್‌ನ ಬಿರುದುಗಳಾದ ಮಹಾರಾಜ, ರಾಜಾಧಿರಾಜ, ಮಹೇಶ್ವರ ಮುಂತಾದವುಗಳನ್ನು ಕಾಣಬಹುದು. ಈ ಬಿರುದುಗಳು ಕಾಡ್‌ಫಿಸಿಸ್‌ನ ಸ್ವತಂತ್ರ ಅಧಿಕಾರವನ್ನು ತಿಳಿಯುವುದಕ್ಕೆ ಅನುಕೂಲವಾಗಿವೆ. ಕಾಡ್‌ಫಿಸಿಸ್‌ನ ಕೆಲವು ನಾಣ್ಯಗಳಲ್ಲಿ ಅವನು ತನ್ನ ವಾಹನವಾದ ನಂದಿಯೊಂದಿಗೆ ನಿಂತಿರುವ ಚಿತ್ರವನ್ನು ಕಾಣಬಹುದು. ಈ ನಾಣ್ಯಗಳು ಎರಡನೆಯ ಕಾಡ್‌ಫಿಸಿಸನು ಹಿಂದೂ ಧರ್ಮವನ್ನು ಅನುಸರಿಸುತ್ತಿದ್ದನೆಂದು ಮತ್ತು ಶಿವನ ಭಕ್ತನಾಗಿದ್ದನೆಂದೂ ಈ ನಾಣ್ಯಗಳಿಂದ ತಿಳಿದುಬರುತ್ತದೆ.

### 52.3.3 ಕಾನಿಷ್ಕ (ಕ್ರಿ.ಶ. 78-120)

ಕುಶಾನ ದೊರೆಗಳಲ್ಲಿ ಕಾನಿಷ್ಕ ಪ್ರಸಿದ್ಧನಾದವನು. ಕಾನಿಷ್ಕನು ಪಶ್ಚಿಮದ ಕ್ಷತ್ರಪ ಮತ್ತು ಪಾರ್ಥಿಯನ್‌ರೊಂದಿಗೆ ಯುದ್ಧ ಮಾಡಿ ವಿಜಯವನ್ನು ಗಳಿಸಿದನು. ಹಾಗೆಯೇ ಯಾರ್‌ಕಂಡ್, ಕ್ಯಾಷಗರ್ ಮತ್ತು ಕೊಟಾನ್ ಪ್ರದೇಶಗಳನ್ನು ಗೆದ್ದುಕೊಂಡನು. ಈತನು ತನ್ನ ಸಾಮ್ರಾಜ್ಯವನ್ನು ಆಫ್‌ಘಾನಿಸ್ತಾನದಿಂದ ಬನಾರಸ್‌ನವರೆಗೂ ವಿಸ್ತರಿಸಿದನು. ಪೆಷಾವರ ಅಥವಾ ಪುರುಷಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.

ಕಾನಿಷ್ಕನು ಪ್ರಾಚೀನ ಭಾರತದಲ್ಲಿ ತನ್ನ ಮಿಲಿಟರಿ ಸಾಧನೆಗಳಿಗಿಂತಲೂ ಹೆಚ್ಚಾಗಿ ತಾನು ಬೌದ್ಧ ಧರ್ಮಾವಲಂಬಿಯಾಗಿ ಬೌದ್ಧ ಮತಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದುದರಿಂದ ಪ್ರಸಿದ್ಧಿಯಾಗಿದ್ದಾನೆ. ಅಲ್ಲದೆ, ಕಾನಿಷ್ಕನು ಸಾಹಿತ್ಯ, ಕಲೆಗಳಿಗೆ ನೀಡಿದ ಪ್ರೋತ್ಸಾಹದಿಂದ ಅವನ ಹೆಸರು ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದೆ. ಕಾನಿಷ್ಕನು ಬೌದ್ಧ ಧರ್ಮದಲ್ಲಿ ತಲೆದೋರಿದ್ದ ಸಮಸ್ಯೆಗಳನ್ನು ಮತ್ತು ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಕಾಶ್ಮೀರದ ಕುಂಡಲವನದಲ್ಲಿ ನಾಲ್ಕನೇ ಬೌದ್ಧ ಸಮ್ಮೇಳನವನ್ನು ಸಮಾವೇಶಗೊಳಿಸಿದನು. ಈ ಸಮ್ಮೇಳನದ ಪರಿಣಾಮವಾಗಿ ಬೌದ್ಧ ಧರ್ಮ ಒಂದು ಹೊಸ ರೂಪವನ್ನು ಪಡೆಯಿತು. ಬೌದ್ಧ ಧರ್ಮ ಎರಡು ಪಂಥಗಳಾಗಿ ಒಡೆದು ಹೀನಯಾನ ಮತ್ತು ಮಹಾಯಾನ ಎಂಬ ಎರಡು ಶಾಖೆಗಳಾಗಿ ಮಾರ್ಪಟ್ಟವು. ಕಾನಿಷ್ಕನು ಹೊಸ ಶಾಖೆಯಾದ ಮಹಾಯಾನ ಬೌದ್ಧ ಪಂಥಕ್ಕೆ ಪ್ರೋತ್ಸಾಹ ನೀಡಿದನು. ಅಶೋಕನಂತೆಯೇ ಬೌದ್ಧ ಮತಾವಲಂಬಿಯಾಗಿ, ಭಾರತದಲ್ಲೆ ಅಲ್ಲದೆ ಹೊರದೇಶಗಳಲ್ಲೂ ಬೌದ್ಧ ಧರ್ಮದ ಪ್ರಚಾರಕ್ಕೆ ಕಾರಣನಾದನು. ಪರಿಣಾಮವಾಗಿ ಕಾನಿಷ್ಕನನ್ನು 'ಎರಡನೆಯ ಅಶೋಕ'ನೆಂದು ಬೌದ್ಧ ದಾಖಲೆಗಳು ಪರಿಗಣಿಸಿವೆ.

ಇಷ್ಟೇ ಅಲ್ಲದೆ, ಕಾನಿಷ್ಕನ ಆಸ್ಥಾನವು ಉತ್ತಮ ಪಂಡಿತರಿಂದ ಕೂಡಿತ್ತು. ಅಶ್ವಘೋಷ, ನಾಗಾರ್ಜುನ, ಚರಕ, ವಾಸುಮಿತ್ರ ಎಂಬ ಅನೇಕ ಹೆಸರಾಂತ ಬೌದ್ಧ ಪಂಡಿತರು ಸಂಸ್ಕೃತದಲ್ಲಿ ಮಹಾನ್ ಗ್ರಂಥಗಳನ್ನು ರಚಿಸಿದರು. ಕಾನಿಷ್ಕನು ಭಾರತೀಯ ಕಲೆಯ ಮೂರ್ತಿ ಶಿಲ್ಪದಲ್ಲಿ ಪ್ರಸಿದ್ಧ ರೂಪವಾದ ಗಾಂಧಾರ ಕಲೆಯನ್ನು ಪೋಷಿಸಿ, ಅದರ ಬೆಳವಣಿಗೆಗೆ ಕಾರಣನಾದನು. ಅದರ ಪರಿಣಾಮವಾಗಿ ಸುಂದರವಾದ ಬುದ್ಧನ ಮತ್ತು ಬೋಧಿಸತ್ವರ ವಿಗ್ರಹಗಳು ಭಾರತೀಯ

ಕಲಾಕ್ಷೇತ್ರದಲ್ಲಿ ಉದ್ಭವಿಸಿದವು. ಇದರೊಂದಿಗೆ ಮಥುರಾ ಶೈಲಿಯ ಮೂರ್ತಿಶಿಲ್ಪವೂ ಕಾನಿಷ್ಕನಿಂದ ಪ್ರೋತ್ಸಾಹಿಸಲ್ಪಟ್ಟಿತು.

## 52.4 ಕುಶಾನರ ಕೊಡುಗೆಗಳು

ಇದುವರೆವಿಗೂ ಕುಶಾನರ ರಾಜಕೀಯ ಇತಿಹಾಸವನ್ನು ಸಂಕ್ಷಿಪ್ತವಾಗಿ ತಿಳಿದಿರಿ. ಕುಶಾನರು ಸಾಧಿಸಿದ ರಾಜಕೀಯ ಭದ್ರತೆಗಿಂತಲೂ, ಅವರು ಭಾರತೀಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧಿಸಿದ ಕಾರ್ಯಗಳು ಇತಿಹಾಸದಲ್ಲಿ ಹೆಚ್ಚು ಪ್ರಸಿದ್ಧವಾದವು. ಧರ್ಮ, ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಿ ಕುಶಾನರು ನೀಡಿದ ಕೊಡುಗೆಗಳು ಅಪಾರವಾದದ್ದು. ಸಾಂಸ್ಕೃತಿಕ ಕ್ಷೇತ್ರದಲ್ಲಿ ಕುಶಾನರು ಒಂದು ಹೊಸ ಯುಗವನ್ನೇ ಸ್ಥಾಪಿಸಿದರು. ಅದಕ್ಕೂ ಮಿಗಿಲಾಗಿ ಭಾರತೀಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳ ಸಮ್ಮಿಲನವು ಕುಶಾನರ ಆಳ್ವಿಕೆಯ ಕಾಲದಲ್ಲಿ ನಿಚ್ಚಳವಾಗಿ ಪ್ರಾರಂಭವಾಯಿತು.

### 52.4.1 *ಧರ್ಮ*

ಪ್ರಾರಂಭದ ಕುಶಾನ ದೊರೆಗಳು ಬಹುದೇವತಾರಾಧಕರಾಗಿದ್ದರು. ಇವರು ಶಿವ, ವಿಷ್ಣು, ವಾಸುದೇವ, ಕೃಷ್ಣ ಮೊದಲಾದ ದೇವರುಗಳನ್ನು ಪೂಜಿಸುತ್ತಿದ್ದರಲ್ಲದೆ ಬುದ್ಧನನ್ನು ಸಹ ಪೂಜಿಸುತ್ತಿದ್ದರು. ಕಾನಿಷ್ಕನು ಬೌದ್ಧ ಮತಾವಲಂಬಿಯಾಗಿದ್ದು ಬೌದ್ಧ ಧರ್ಮವನ್ನು ಹೆಚ್ಚಾಗಿ ಪ್ರೋತ್ಸಾಹಿಸಿದನು. ಭಾರತದಲ್ಲಿ ಬೌದ್ಧ ಧರ್ಮಕ್ಕೆ ರಾಜಾಶ್ರಯವನ್ನು ನೀಡಿದ ರಾಜರಲ್ಲಿ ಕಾನಿಷ್ಕನು ಎರಡನೆಯವನು. ಹಾಗೆಂದು ಅವನು ಅನ್ಯ ಧರ್ಮಗಳ ವಿರೋಧಿಯಾಗಿರಲಿಲ್ಲ. ಎಲ್ಲಾ ಧರ್ಮಗಳನ್ನು ಸಮಾನ ದೃಷ್ಟಿಯಿಂದ ನೋಡುತ್ತಿದ್ದನು. ಅವನ ನಾಣ್ಯಗಳಲ್ಲಿ ಕಂಡುಬರುವ ಹಿಂದೂ, ಬೌದ್ಧ, ಗ್ರೀಕ್, ಸುಮೇರಿಯನ್, ಪರ್ಶಿಯನ್ ದೇವತೆಗಳ ಚಿತ್ರಗಳು ಈ ಮಾತನ್ನು ಪುಷ್ಟೀಕರಿಸುತ್ತವೆ.

ಕುಶಾನರ ಕಾಲದಲ್ಲಿ ಬೌದ್ಧ ಧರ್ಮದಲ್ಲಿ ಅತಿ ಮುಖ್ಯವಾದ ಬದಲಾವಣೆ ಕಂಡುಬಂದಿತು. ಈ ಕಾಲದಲ್ಲಿ ಬೌದ್ಧ ಧರ್ಮದ ವ್ಯಾಪ್ತಿ ಹೆಚ್ಚಾಯಿತು ಹಾಗೂ ಬೌದ್ಧ ಧರ್ಮದಲ್ಲಿ ಅತಿ ಮಹತ್ವವಾದ ಬೆಳವಣಿಗೆಯಾಯಿತು. ಅದೇನೆಂದರೆ ಬುದ್ಧನ ಮರಣಾನಂತರ ಬೌದ್ಧ ಸಂಘಗಳಲ್ಲಿ ಅದುವರೆವಿಗೆ ನಡೆದು ಬಂದಿದ್ದ ಆಚಾರ, ವಿಚಾರ, ನಂಬಿಕೆ ಮುಂತಾದವುಗಳಲ್ಲಿ ಬೌದ್ಧ ಭಿಕ್ಷುಗಳಲ್ಲಿ ಭಿನ್ನಾಭಿಪ್ರಾಯವುಂಟಾಯಿತು. ಈ ಭಿನ್ನಾಭಿಪ್ರಾಯಗಳಿಂದ ಬೌದ್ಧ ಧರ್ಮದಲ್ಲಿ ಮಹತ್ವದ ಬಿರುಕುಂಟಾಯಿತು. ಬೌದ್ಧ ಧರ್ಮದ ಪ್ರಚಾರ ಸ್ವಲ್ಪ ಮಟ್ಟಿಗೆ ಕುಂಠಿತವಾಯಿತು. ಕಾನಿಷ್ಕನಿಗೆ ಇದರಿಂದ ಗೊಂದಲವುಂಟಾಗಿ ಬೌದ್ಧ ಧರ್ಮದಲ್ಲುಂಟಾದ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಲು ಹಾಗೂ ಬೌದ್ಧ ಧರ್ಮದ ಪವಿತ್ರ ಬರವಣಿಗೆಗಳನ್ನು ಪರಿಷ್ಕರಿಸಲು ನಿಶ್ಚಯಿಸಿದನು. ಈ ಹಿನ್ನೆಲೆಯಲ್ಲಿ ಕಾನಿಷ್ಕನು ತನ್ನ ರಾಜ್ಯದಲ್ಲಿ 4ನೇ ಬೌದ್ಧ ಸಮ್ಮೇಳನವನ್ನು ಸಮಾವೇಶಗೊಳಿಸಿದನು. ಈ ಸಮಾವೇಶದಲ್ಲಿ ಭಾಗವಹಿಸಲು ಭಾರತದಲ್ಲಿ ಮಾತ್ರವಲ್ಲದೆ, ಹೊರದೇಶಗಳಲ್ಲಿನ ಬೌದ್ಧ ಸನ್ಯಾಸಿಗಳನ್ನು ಕೂಡ ಆಮಂತ್ರಿಸಲಾಯಿತು.

### 52.4.2 *ನಾಲ್ಕನೇ ಬೌದ್ಧ ಸಮ್ಮೇಳನ*

ಬೌದ್ಧ ಧರ್ಮದಲ್ಲಿ ತಲೆದೋರಿದ್ದ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿ ಗೊಂದಲವನ್ನು ತಿಳಿಗೊಳಿಸಲು ಕಾನಿಷ್ಕನು 4ನೇ ಬೌದ್ಧ ಮಹಾ ಸಮ್ಮೇಳನವನ್ನು ಕಾಶ್ಮೀರದಲ್ಲಿ ಸಮಾವೇಶಗೊಳಿಸಿದನು. 4ನೇ ಬೌದ್ಧ ಸಮ್ಮೇಳನದ ಕುರಿತಾದ ವಿವರಣೆಯು ಟಿಬೆಟ್ ದೇಶದ ಇತಿಹಾಸಕಾರನಾದ ತಾರಾನಾಥನ ವರದಿಯಿಂದ ತಿಳಿದು ಬರುತ್ತದೆ. ಈ ಸಮ್ಮೇಳನವು ಕಾಶ್ಮೀರದ ಕುಂಡಲವನದ ಬೌದ್ಧ ವಿಹಾರದಲ್ಲಿ ನೆರವೇರಿತು. ಈ ಸಮಾವೇಶದಲ್ಲಿ ಬೌದ್ಧ ಧರ್ಮದ ಪವಿತ್ರ ಬರವಣಿಗೆಗಳನ್ನು ಒಟ್ಟಿಗೆ ಕಲೆಹಾಕಿ, ಅವುಗಳಿಗೆ ವ್ಯಾಖ್ಯಾನಗಳನ್ನು ತಯಾರಿಸಲಾಯಿತು. ಈ

ಸಮ್ಮೇಳನದ ಅಧ್ಯಕ್ಷತೆಯನ್ನು ವಸುಮಿತ್ರನೆಂಬ ಬೌದ್ಧ ವಿದ್ವಾಂಸನು ವಹಿಸಿದ್ದನು. ಅಶ್ವಘೋಷನೆಂಬ ಮತ್ತೊಬ್ಬ ವಿದ್ವಾಂಸನು ಈ ಸಮ್ಮೇಳನದ ಉಪಾಧ್ಯಕ್ಷನಾಗಿದ್ದನು. ಉಪಲಬ್ಧವಿದ್ದ ಬೌದ್ಧಧರ್ಮದ ಎಲ್ಲಾ ಸಾಹಿತ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಅವುಗಳಿಗೆ ವ್ಯಾಖ್ಯಾನಗಳನ್ನು ಸಿದ್ಧಪಡಿಸಲಾಯಿತು. ಈ ಸಮ್ಮೇಳನದಲ್ಲಿ ಬೌದ್ಧ ಧರ್ಮದ ಪವಿತ್ರ ಗ್ರಂಥಗಳಾದ ತ್ರಿಪಿಟಕಗಳಿಗೆ, **ಮಹಾವಿಭಾಷ** ಎಂಬ ವ್ಯಾಖ್ಯಾನವನ್ನು ರಚಿಸಲಾಯಿತು.

ಬುದ್ಧನ ಮರಣಾನಂತರ ಬೌದ್ಧ ಧರ್ಮದ ತತ್ವಗಳನ್ನು ಅನುಸರಿಸುವವರಲ್ಲಿ ಹಾಗೂ ಬೌದ್ಧ ಭಿಕ್ಷುಗಳಲ್ಲಿ ಕಾಲಾನುಕ್ರಮೇಣ ಅನೇಕ ಹೊಸ ವಿಚಾರಗಳು, ಆಚಾರಗಳು, ನಂಬಿಕೆಗಳು ತಲೆದೋರಿ ಬುದ್ಧನ ಮೂಲ ತತ್ವಗಳನ್ನು ಪ್ರಚಾರ ಮಾಡುವಲ್ಲಿ ಅನೇಕ ಬದಲಾವಣೆಗಳು ಕಂಡು ಬಂದವು. ಬೌದ್ಧ ಸನ್ಯಾಸಿಗಳಲ್ಲೇ ಈ ವಿಷಯಗಳ ಬಗ್ಗೆ ಜಿಜ್ಞಾಸೆ ಮೂಡಿ ಧರ್ಮ ಪ್ರಚಾರ ಕುಂಠಿತಗೊಂಡಿತು. ಬೌದ್ಧ ಸಂಘಗಳಾಗಲೀ, ವಿದ್ವಾಂಸರಾಗಲೀ ಸಮ್ಮೇಳನದಲ್ಲಿ ಈ ಗೊಂದಲವನ್ನು ನಿವಾರಿಸಲು ಸಾಧ್ಯವಾಗಲಿಲ್ಲ. ಬುದ್ಧನ ಮೂಲ ತತ್ವಗಳ ಅನುಷ್ಠಾನಕ್ಕಿಂತಲೂ, ಅನ್ಯ ಧರ್ಮಗಳಿಂದ ಪ್ರಭಾವಿತರಾದ ಹಲವಾರು ಆಚಾರ ವಿಚಾರಗಳ ಬಗ್ಗೆಯೇ ಹೆಚ್ಚು ವಿಶ್ವಾಸ ಬೌದ್ಧ ಭಿಕ್ಷುಗಳಲ್ಲಿ ಹಾಗೂ ಬೌದ್ಧ ಧರ್ಮದ ಅನುಯಾಯಿಗಳಲ್ಲಿ ಕಂಡು ಬಂದಿತು. ಎಷ್ಟಾದರೂ ಈ ಬಿಕ್ಕಟ್ಟನ್ನು ಪರಿಹಾರ ಮಾಡಲಾಗಲಿಲ್ಲ. ತತ್ಪರಿಣಾಮವಾಗಿ, ಬೌದ್ಧ ಧರ್ಮ ಎರಡು ಶಾಖೆಗಳಾಗಿ ಒಡೆಯಿತು. ಬುದ್ಧನ ಮೂಲ ತತ್ವಗಳಲ್ಲಿ ನಂಬಿಕೆಯಿಟ್ಟು ಅವುಗಳನ್ನು ಆಚರಣೆಯಲ್ಲಿ ಪಾಲಿಸಿದ ಶಾಖೆಯನ್ನು ಹೀನಯಾನ ಪಂಥವೆಂದೂ, ಅನ್ಯಧರ್ಮಗಳ ಸಂಪರ್ಕದಿಂದ ಅವುಗಳ ವಿಚಾರಧಾರೆಯನ್ನು, ತತ್ವಗಳನ್ನು ಬೌದ್ಧ ಧರ್ಮದ ತತ್ವಗಳೊಂದಿಗೆ ಸೇರಿಸಿ ಅನುಸರಿಸಿದ ಶಾಖೆಯನ್ನು ಮಹಾಯಾನ ಪಂಥವೆಂದು ಕರೆಯಲಾಯಿತು. ಮಹಾಯಾನ ಪಂಥವು ಹೀನಯಾನ ಪಂಥಕ್ಕಿಂತ ಹೆಚ್ಚು ಜನಪ್ರಿಯವಾಗಿ ಹೊರದೇಶಗಳಲ್ಲೂ ಹರಡಿತು. ಕಾನಿಷ್ಕನು ಮಹಾಯಾನ ಬೌದ್ಧ ಪಂಥವನ್ನು ಪೋಷಿಸಿ, ರಾಜ್ಯಧರ್ಮವನ್ನಾಗಿ ಸ್ವೀಕರಿಸಿದನು.

### *52.4.3 ಮಹಾಯಾನ ಬೌದ್ಧ ಪಂಥದ ಲಕ್ಷಣಗಳು*

ಬೌದ್ಧ ಧರ್ಮದ ತತ್ವಗಳು ಹೊಸ ಸುಧಾರಣೆಗಳನ್ನು ಪಡೆದುಕೊಂಡವು. ಹೊಸ ಪಂಥವಾದ ಮಹಾಯಾನ ಬೌದ್ಧ ಧರ್ಮದ ಅನುಯಾಯಿಗಳಿಗೆ ಹೊಸ ತತ್ವಗಳನ್ನು ಗೊತ್ತು ಪಡಿಸಲಾಯಿತು. ಹೀನಯಾನ ಬೌದ್ಧ ತತ್ವದ ಪ್ರಕಾರ ಮಾನವನು ಮುಕ್ತಿಯನ್ನು ಪಡೆಯಬೇಕಾದರೆ ತನ್ನ ಒಳ್ಳೆಯ ಕೆಲಸಗಳಿಂದ ಮಾತ್ರ ಸಾಧಿಸಬೇಕಾಗಿತ್ತು. ಆತನು ಯಾವುದೇ ದೇವರನ್ನು ಕುರಿತು ಪ್ರಾರ್ಥನೆ ಮಾಡುವುದಾಗಲೀ, ಮಾಡಿದ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡುವುದಾಗಲೀ, ಅಥವಾ ಬುದ್ಧನನ್ನು ಕುರಿತು ಪ್ರಾರ್ಥನೆ ಮಾಡುವುದಾಗಲೀ ಹೀನಯಾನ ಬೌದ್ಧ ತತ್ವಗಳಲ್ಲಿ ಕಂಡುಬರುತ್ತಿರಲಿಲ್ಲ. ಆದರೆ, ಮಹಾಯಾನ ಬೌದ್ಧ ಪಂಥವು ಬುದ್ಧನನ್ನು ಗುರುವಿನ ಸ್ಥಾನದಿಂದ ದೇವರ ಸ್ಥಾನಕ್ಕೆ, ಮಾತ್ರವಲ್ಲದೆ ದೇವರ ದೇವನ ಸ್ಥಾನಕ್ಕೆ ಏರಿಸಿತು. ಪರಿಣಾಮವಾಗಿ, ಬೌದ್ಧಧರ್ಮವು ಕುಶಾನರ ಕಾಲದಲ್ಲಿ ಈಶ್ವರವಾದವನ್ನು ಮತ್ತು ವಿಗ್ರಹಾರಾಧನೆಯನ್ನು ಬಿಂಬಿಸಿತು. ಅದರಂತೆ, ಬುದ್ಧನನ್ನು ಮೂರ್ತಿ ರೂಪದಲ್ಲಿ ಪೂಜಿಸುವ ಪದ್ಧತಿ ಜಾರಿಗೆ ಬಂದಿತು. ಬುದ್ಧನ ಮೂರ್ತಿಯೊಂದಿಗೆ ಭೋದಿಸತ್ವಗಳ ಮೂರ್ತಿಗಳನ್ನು ಪೂಜಿಸುವ ರೂಢಿ ಪ್ರಬಲವಾಯಿತು. ಅಲ್ಲದೆ, ಭೋದಿಸತ್ವರು ಬುದ್ಧ ಮತ್ತು ಅವನ ಭಕ್ತರ ನಡುವಿನ ಮಧ್ಯವರ್ತಿಗಳೆಂಬ ನಂಬಿಕೆ ಬೆಳೆಯಿತು. ಮಹಾಯಾನ ಪಂಥವು ಹಿಂದೂಗಳ ಯೋಗ, ಮತ್ತಿತರ ಸಂಸ್ಕಾರಗಳನ್ನು ಅನುಕರಣೆ ಮಾಡಿತು. ಇದರಿಂದ ಮಹಾಯಾನ ಬೌದ್ಧ ಪಂಗವು ವೈವಿಧ್ಯತೆಯನ್ನು ಪಡೆದುಕೊಂಡು ಹೆಚ್ಚು ಸಕ್ರಿಯವಾಗಿ ಬೆಳೆದು ಹಳೆಯ ಬೌದ್ಧ ಅನುಯಾಯಿಗಳ ಮೇಲೆ ಸವಾಲನ್ನೆಸೆಯಿತು. ಮತ್ತೊಂದೆಡೆ ಇದಕ್ಕೆ ಪರ್ಯಾಯವಾಗಿ, ಹೀನಯಾನ ಬೌದ್ಧ ಪಂಥವು ಹೆಚ್ಚಿನ ಬೆಳವಣಿಗೆಯನ್ನು ಕಾಣದೆ, ವೈವಿಧ್ಯವಿಲ್ಲದ

ಬೇಸರ ಹಿಡಿಸುವ ಪಂಥವಾಗಿ ಉಳಿಯಿತು. ಮಹಾಯಾನ ಬೌದ್ಧ ಪಂಥವು ಸಂಸ್ಕೃತವನ್ನು ತನ್ನ ಭಾಷಾ ಮಾಧ್ಯಮವನ್ನಾಗಿ ಮಾಡಿಕೊಂಡಿತು. ಈ ಪಂಥವು ಔತ್ತರೇಯ ಬೌದ್ಧ ಶೈಲಿ ಎಂದು ಹೆಸರಾಯಿತು. ಹೀನಯಾನ ಪಂಥವು ಪಾಳಿಯನ್ನು ತನ್ನ ಭಾಷಾ ಮಾಧ್ಯಮವನ್ನಾಗಿ ಉಳಿಸಿಕೊಂಡಿತು ಮತ್ತು ದಾಕ್ಷಿಣಾತ್ಯ ಬೌದ್ಧ ಶೈಲಿ ಎನಿಸಿಕೊಂಡಿತು. ಕುಶಾನರು ಮಹಾಯಾನ ಬೌದ್ಧ ಪಂಥವನ್ನು ಪೋಷಿಸಿದ್ದರಿಂದ ಅದು ಬಹಳ ಶೀಘ್ರವಾಗಿ ಭಾರತದ ಗಡಿಯಾಚೆಗಿನ ದೇಶಗಳಾದ ಟಿಬೆಟ್, ಚೀನಾ, ಬರ್ಮಾ ಮತ್ತು ಜಪಾನ್‌ಗಳಿಗೆ ಪ್ರಸರಿಸಿತು.

### 52.4.4 *ಮಹಾಯಾನ ಬೌದ್ಧ ಪಂಥದ ಹರಡುವಿಕೆ*

ಸಾಮ್ರಾಟ ಅಶೋಕನಂತೆ ಕಾನಿಷ್ಕನು ಬೌದ್ಧ ಧರ್ಮದ ಹರಡುವಿಕೆಗೆ ಹೆಚ್ಚು ಶ್ರಮಿಸಿದನು. ಹಲವಾರು ಬೌದ್ಧ ಸನ್ಯಾಸಿಗಳ ಮಠಗಳು, ವಿಹಾರಗಳನ್ನು ದುರಸ್ತಿಮಾಡಿಸಿದುದಲ್ಲದೆ, ಹೊಸ ಮಠಗಳ ನಿರ್ಮಾಣಕ್ಕೆ ಕಾನಿಷ್ಕನು ಕಾರಣನಾದನು. ಅಪಾರವಾದ ಸಂಪತ್ತನ್ನು ಕಾನಿಷ್ಕನು ಬೌದ್ಧ ಸನ್ಯಾಸಿಗಳಿಗೆ, ಮಠಗಳಿಗೆ ಮತ್ತು ಅವುಗಳ ಮೇಲ್ವಿಚಾರಣೆಗಾಗಿ ವಿನಿಯೋಗಿಸಿದನು. ಹಲವು ಸ್ತೂಪಗಳನ್ನು ನಿರ್ಮಿಸಿದನು. ಬೌದ್ಧ ಧರ್ಮವನ್ನು ಹೊರದೇಶಗಳಿಗೆ ಹರಡಲು ಅನೇಕ ಬೌದ್ಧ ಸನ್ಯಾಸಿಗಳನ್ನು ಕಾನಿಷ್ಕನು ಕಳುಹಿಸಿದನು. ಭಾರತದ ಗಡಿಯಾಚೆಗಿನ ದೇಶಗಳಿಗೆ ಬೌದ್ಧ ಧರ್ಮದ ತತ್ವಗಳನ್ನು ಹರಡುವಂತೆ ಮಾಡಿದನು.

ಈ ರೀತಿ ಕಾನಿಷ್ಕನು ಬೌದ್ಧ ಧರ್ಮದ ವಿಸ್ತರಣೆಗೆ ಹಾಗೂ ಹರಡುವಿಕೆಗೆ ಕಾರಣನಾದನು. ಒಟ್ಟಿನಲ್ಲಿ ಈ ಕಾಲ ಧಾರ್ಮಿಕ ಕ್ಷೋಬೆ ಮತ್ತು ಧರ್ಮ ಪ್ರಚಾರಕರ ಚಟುವಟಿಕೆಗಳಿಂದ ಕೂಡಿತ್ತು.

ಕಾನಿಷ್ಕನು ಮಹಾಯಾನ ಪಂಥದ ಅನುಯಾಯಿಯಾಗಿದ್ದು, ಬೌದ್ಧ ಧರ್ಮದ ಏಳಿಗೆಗೆ ಹಾಗೂ ಪ್ರಚಾರಕ್ಕೆ ಕಾರಣನಾದರೂ ಸಹ ಅವನು ಅನ್ಯಮತ ಸಹಿಷ್ಣುವಾಗಿದ್ದನು. ಬೌದ್ಧ ಧರ್ಮದಷ್ಟೇ ಗೌರವವನ್ನು ಅನ್ಯಮತಗಳಿಗೂ ಕೊಟ್ಟಿದ್ದನು. ಜೈನಧರ್ಮ, ಶೈವಧರ್ಮ, ವೈಷ್ಣವಧರ್ಮಗಳೂ ಆಚರಣೆಯಲ್ಲಿದ್ದವು. ಅವರೊಂದಿಗೆ ಕಾರ್ತಿಕೇಯ, ವಾಸುದೇವ, ಮಿಹಿರ, ಕೃಷ್ಣ ಮುಂತಾದ ದೇವರುಗಳನ್ನು ಪೂಜಿಸುವ ಪದ್ಧತಿಯೂ ಈ ಕಾಲದಲ್ಲಿ ಬಹಳವಾಗಿತ್ತು.

## 52.5 ಕುಶಾನರ ಕಾಲದಲ್ಲಿ ಸಾಹಿತ್ಯದ ಬೆಳವಣಿಗೆ

ಕಾನಿಷ್ಕನು ಸಂಸ್ಕೃತ ಸಾಹಿತ್ಯದ ಉದಾರ ಪೋಷಕನಾಗಿದ್ದನು. ಈತನ ಉದಾರ ಪೋಷಣೆಯಲ್ಲಿ ಗಣನೀಯ ಸಂಖ್ಯೆಯಲ್ಲಿ ಉತ್ತಮ ಮಟ್ಟದ ಧಾರ್ಮಿಕ ಹಾಗೂ ಲೌಕಿಕ ಸಂಸ್ಕೃತ ಸಾಹಿತ್ಯ ಸೃಷ್ಟಿಯಾಯಿತು. ಬೌದ್ಧ ಸಾಹಿತ್ಯದ ದಿಗ್ಗಜಗಳಾದ ಅಶ್ವಘೋಶ, ನಾಗಾರ್ಜುನ, ವಸುಮಿತ್ರ, ಚರಕ ಮೊದಲಾದ ವಿದ್ವಾಂಸರು ಕಾನಿಷ್ಕನ ಆಸ್ಥಾನದಲ್ಲಿದ್ದು, ಅವನ ಉದಾರ ಪೋಷಣೆಯನ್ನು ಪಡೆದಿದ್ದರು. ಕಾನಿಷ್ಕನ ಆಸ್ಥಾನದಲ್ಲಿದ್ದ ವಿದ್ವಾಂಸರುಗಳಲ್ಲಿ ಅಶ್ವಘೋಶನು ಅತಿಶ್ರೇಷ್ಠನಾಗಿದ್ದನು. ಈತನು ಕವಿ ಮಾತ್ರವಾಗಿರದೆ, ಸಂಗೀತ, ಸಾಹಿತ್ಯ, ಧರ್ಮ, ತತ್ವಶಾಸ್ತ್ರ ಮತ್ತು ಚರ್ಚೆಗಳಲ್ಲಿ ನುರಿತ ವಿದ್ವಾಂಸನಾಗಿದ್ದನು. ಈತನು ಬುದ್ಧಚರಿತ, ಸೌಂದರಾನಂದ ಕಾವ್ಯ, ಸಾರೀಪುತ್ರ ಪ್ರಕರಣ, ವಜ್ರಸೂಚಿ ಮುಂತಾದ ಹಲವಾರು ಗ್ರಂಥಗಳನ್ನು ರಚಿಸಿದನು. ಈತನು ರಚಿಸಿದ ಬುದ್ಧಚರಿತ ಬುದ್ಧನ ಜೀವನವನ್ನು ವಿವರಿಸುವ ಗ್ರಂಥವಾಗಿದ್ದು ಬೌದ್ಧ ಧರ್ಮೀಯರ ಮಹಾಕಾವ್ಯವಾಗಿದೆ.

ಈ ಕಾಲದ ಮತ್ತೊಬ್ಬ ಪ್ರಸಿದ್ಧ ವಿದ್ವಾಂಸ ನಾಗಾರ್ಜುನ. ಈತನು ಬಹು ದೊಡ್ಡ ತತ್ವಶಾಸ್ತ್ರಜ್ಞನೂ ಮತ್ತು ಶ್ರೇಷ್ಠ ಭೋದಕನೂ ಆಗಿದ್ದನು. ನಾಗಾರ್ಜುನನು ಮಹಾಯಾನ ಬೌದ್ಧ ಧರ್ಮದ ಪ್ರಮುಖವಾದ ಪ್ರತಿಪಾದಕನಾಗಿದ್ದನು. ಚೀನೀ ಯಾತ್ರಿಕ ಹುಯನ್ ತ್ಸಾಂಗನು ಈತನನ್ನು

ಪ್ರಪಂಚದ ಪ್ರಮುಖ ನಾಲ್ಕು ಬೆಳಕುಗಳಲ್ಲಿ ಒಬ್ಬ ಎಂದಿದ್ದಾನೆ. ನಾಗಾರ್ಜುನನ ಕೃತಿ ಪ್ರಾಜ್ಞನ ಪರಿಮಿತ ಸೂತ್ರಶಾಸ್ತ್ರ. ಈತನು ದೊಡ್ಡ ವಿಜ್ಞಾನಿಯಾಗಿದ್ದು, ತನ್ನ ಮಾಧ್ಯಮಿಕ ಸೂತ್ರವೆಂಬ ಕೃತಿಯಲ್ಲಿ ಸಾಪೇಕ್ಷತ್ವದ ಸಿದ್ಧಾಂತವನ್ನು ಎತ್ತಿಹಿಡಿದಿದ್ದಾನೆ. ಕಾನಿಷ್ಕನ ಕಾಲದ ಮತ್ತೊಬ್ಬ ವಿದ್ವಾಂಸ ವಸುಮಿತ್ರ. ಈತನು 4ನೇ ಬೌದ್ಧ ಸಮ್ಮೇಳನದ ಅಧ್ಯಕ್ಷನಾಗಿದ್ದನು. ಈತನು ಈ ಕಾಲದ ಪ್ರಮುಖ ಬೌದ್ಧ ಧರ್ಮದ ಪ್ರತಿಪಾದಕನಾಗಿದ್ದನು. ಈತನು ತ್ರಿಪಿಟಕಗಳಿಗೆ ಮಹಾವಿಭಾಷಶಾಸ್ತ್ರವೆಂಬ ವ್ಯಾಖ್ಯಾನವನ್ನು ರಚಿಸಿದನು. ಮಹಾವಿಭಾಷ ಶಾಸ್ತ್ರವು ಮಹಾಯಾನ ಬೌದ್ಧ ಧರ್ಮದ ವಿಶ್ವಕೋಶವೆನಿಸಿದೆ. ಕಾನಿಷ್ಕನ ಆಸ್ಥಾನದಲ್ಲಿದ್ದ ಮತ್ತೊಬ್ಬ ವಿದ್ವಾಂಸನೆಂದರೆ ಚರಕ. ಈತನು ಈ ಕಾಲದ ಪ್ರಸಿದ್ಧ ವೈದ್ಯನಾಗಿದ್ದು, ಕಾನಿಷ್ಕನಿಗೂ ರಾಜವೈದ್ಯನಾಗಿದ್ದನು. ಈತನ ಕೃತಿಯಾದ ಚರಕ ಸಂಹಿತವು ವೈದ್ಯಕೀಯ ವಿಷಯದಲ್ಲಿ ಮಹಾಗ್ರಂಥವಾಗಿದೆ. ಈ ಕಾಲದ ಮತ್ತೊಬ್ಬ ವೈದ್ಯ ಶುಶ್ರುತ. ಈತನ ಕೃತಿಯಾದ ಶುಶ್ರುತ ಸಂಹಿತದಲ್ಲಿ ಶರೀರಶಾಸ್ತ್ರ, ಶಸ್ತ್ರಚಿಕಿತ್ಸೆ, ಮೊದಲಾದವುಗಳ ಬಗ್ಗೆ ವಿವರಣೆಯನ್ನು ನೀಡಿದ್ದಾನೆ.

ಕಾನಿಷ್ಕನ ಕಾಲದ ಸಾಹಿತ್ಯ ವಿವಿಧತೆಯಿಂದ ಕೂಡಿತ್ತು. ಈ ಕಾಲದಲ್ಲಿ ಸಾಹಿತ್ಯ, ಧಾರ್ಮಿಕ, ಲೌಕಿಕ, ವಿಜ್ಞಾನ, ವೈದ್ಯಶಾಸ್ತ್ರ, ತತ್ವಶಾಸ್ತ್ರ ಈ ಎಲ್ಲಾ ವಿಷಯಗಳನ್ನು ಒಳಗೊಂಡಿದ್ದವು. ಗುಪ್ತರ ಯುಗಕ್ಕಿಂತ ಮೊದಲು ಪ್ರಾಚೀನ ಭಾರತದಲ್ಲಿ ಸೃಷ್ಟಿಯಾದ ಸಾಹಿತ್ಯದಲ್ಲಿ ಕಾನಿಷ್ಕನ ಕಾಲದ ಸಾಹಿತ್ಯ ಕೃತಿಗಳು ಶ್ರೇಷ್ಠವಾದವು.

## 52.6 ಕಲೆ : ಗಾಂಧಾರ ಶೈಲಿ

ಭಾರತದ ಮೇಲೆ ಧಾಳಿ ಮಾಡಿದ ಗ್ರೀಕರು, ಶಕರು, ಕುಶಾನರು ಅಂತಿಮವಾಗಿ ತಮ್ಮ ಮೂಲ ಪ್ರಕೃತಿಯನ್ನು ಕಳೆದುಕೊಂಡು ಕಾಲಾನಂತರ ಭಾರತೀಯರೇ ಆದರು. ಇಂತಹ ವಿದೇಶಿ ಮೂಲದ ರಾಜರು ಭಾರತದ ಕಲೆ, ತತ್ವಶಾಸ್ತ್ರ, ಧರ್ಮಗಳಿಗೆ ಮಾರುಹೋಗಿ, ಅವುಗಳಿಂದ ಪ್ರಭಾವಿತರಾಗಿ ಅವುಗಳನ್ನು ಪೋಷಿಸಿ ಬೆಳೆಸಿದರು. ಕುಶಾನರು ಹೊರದೇಶದ ಅನೇಕ ಶೈಲಿಗಳಲ್ಲಿ ಪರಿಣಿತರಾದ ಕುಶಲಕರ್ಮಿಗಳನ್ನು ತಮ್ಮೊಂದಿಗೆ ಕರೆತಂದಿದ್ದರು. ಭಾರತೀಯ ಕುಶಲಕರ್ಮಿಗಳು ವಾಯುವ್ಯ ಗಡಿಭಾಗದಲ್ಲಿದ್ದ ಗಾಂಧಾರ ಪ್ರದೇಶದಲ್ಲಿ ರೋಮ್ ಮತ್ತು ಗ್ರೀಕ್ ಕುಶಲಕರ್ಮಿಗಳೊಡನೆ ಬೆರೆತರು. ಇದರ ಫಲವಾಗಿ ಭಾರತೀಯ ಕುಶಲಕರ್ಮಿಗಳಿಗೆ ವಿದೇಶಗಳ ಅದರಲ್ಲೂ ಗ್ರೀಕ್ ಮತ್ತು ರೋಮನ್ನರ ಕಲಾ ವಿಶಿಷ್ಟತೆಯನ್ನು ತಿಳಿಯಲು ಅವಕಾಶವಾದಂತಾಯಿತು. ತತ್ಪರಿಣಾಮವಾಗಿ, ಭಾರತೀಯ ಕಲಾಶೈಲಿಯಲ್ಲಿ ಒಂದು ಹೊಸ ಶೈಲಿ ಉದ್ಭವವಾಯಿತು. ಅದೇ ಗಾಂಧಾರ ಶೈಲಿ. ಗಾಂಧಾರ ಪ್ರದೇಶದಲ್ಲಿ ಈ ಶೈಲಿಯು ಜನ್ಮ ಪಡೆದಿದ್ದರಿಂದ ಈ ಶೈಲಿಗೆ ಗಾಂಧಾರ ಶೈಲಿಯೆಂದೇ ಹೆಸರಾಯಿತು. ಗ್ರೀಕ್-ರೋಮನ್ ಶೈಲಿಯ ಮಾದರಿಯಲ್ಲಿ ಬುದ್ಧನ ಮತ್ತು ಭೋದಿಸತ್ವರ ವಿಗ್ರಹಗಳನ್ನು ಸುಂದರವಾಗಿ ಕೆತ್ತಿದ್ದೇ ಈ ಕಲೆಯ ವಿಶಿಷ್ಟತೆ. ಇಲ್ಲಿಯವರೆಗೂ, ಬುದ್ಧನನ್ನು ಮೂರ್ತಿಯ ರೂಪದಲ್ಲಿ ಕೆತ್ತಿರಲಿಲ್ಲ. ಆಫ್ಘಾನಿಸ್ತಾನದ ಜಲಾಲಬಾದ್, ಹಡ್ಡ ಮತ್ತು ಬುನಿಯನ್, ಸ್ವಾಕ್ ಕಣಿವೆ ಮತ್ತು ಪೆಷಾವರ್ ಜಿಲ್ಲೆ ಈ ಶೈಲಿಯ ಪ್ರಮುಖ ಕೇಂದ್ರಗಳು.

### *52.6.1 ಗಾಂಧಾರ ಕಲೆಯ ಹುಟ್ಟು ಮತ್ತು ಬೆಳವಣಿಗೆ*

ಗಾಂಧಾರ ಶೈಲಿಯ ಮೂರ್ತಿಶಿಲ್ಪ ಹೊಸ ಮಾದರಿಯದು ಹಾಗೂ ಮಹಾಯಾನ ಬೌದ್ಧ ಪಂಥದ ಉಗಮದಿಂದ ಉದ್ಭವಿಸಿದ್ದು ಎಂದು ಹೇಳಬಹುದು. ಇದು ಗ್ರೀಕೊ-ರೋಮನ್ನರ ಶೈಲಿಯಾಗಿದ್ದು, ಭಾರತೀಯ ಮೂರ್ತಿಶಿಲ್ಪಕ್ಕೆ ಹೊಸದಾಗಿ ಸೇರ್ಪಡೆಯಾಯಿತು. ಈ ಶೈಲಿಯು ಕಾನಿಷ್ಕನ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಕಾನಿಷ್ಕನು ಗ್ರೀಕ್ ವಾಸ್ತು ಶೈಲಿಯಲ್ಲಿ ಅನೇಕ ಸ್ತೂಪಗಳನ್ನು, ಬೌದ್ಧ ವಿಹಾರಗಳನ್ನು ಕಟ್ಟಿಸಿದನು. ಈ ಕಾಲದ ಶಿಲ್ಪಗಳಿಗೆ ಮಹಾಯಾನ ಬೌದ್ಧ

ಪಂಥವು ವೈವಿಧ್ಯತೆಯನ್ನು ದೊರಕಿಸಿಕೊಟ್ಟಿತು. ಈ ಹೊಸ ಕಲಾಶೈಲಿಯು ಸಂಪೂರ್ಣವಾಗಿ ಮಹಾಯಾನ ಬೌದ್ಧ ತತ್ವಗಳನ್ನೇ ಬಿಂಬಿಸಿತು. ಈ ಶೈಲಿಯ ಚಿತ್ರಗಳಲ್ಲಿ ಬುದ್ಧನ ತಾಯಿಯ ಚಿತ್ರವು ಅಕೇನಿಯಾದ ಮೇಟ್ರನ್‌ನ್ನು ಮತ್ತು ಅಪೋಲೋವಿನ ವಿವಿಧ ಮುಖಗಳನ್ನು ಹೋಲುವ ಬುದ್ಧನ ಜೀವನದ ಚಿತ್ರಗಳಾಗಿವೆ.

ಈ ಹೊಸ ಶೈಲಿಯು ಮಹಾಯಾನ ಬೌದ್ಧ ಪಂಥದ ಕೇಂದ್ರವಾದ ಗಾಂಧಾರ ಪ್ರಾಂತ್ಯದಲ್ಲಿ ಪ್ರಾಬಲ್ಯಕ್ಕೆ ಬಂದಿತು. ಈ ಗಾಂಧಾರ ಪ್ರಾಂತ್ಯವು ಭಾರತೀಯರ, ಚೀನೀಯರ, ಇರಾನಿಯನ್ನರ, ಗ್ರೀಕರ ಹಾಗೂ ರೋಮನ್ನರ ಸಂಪರ್ಕ ಸೇತುವೆಯಾಗಿತ್ತು. ಈ ಕಾರಣದಿಂದ ಸಹಜವಾಗಿ ಈ ಪ್ರಾಂತ್ಯವು ಎಲ್ಲಾ ವಿದೇಶಿಯರ ಸಂಬಂಧವನ್ನು ಪಡೆದುಕೊಂಡು, ಅವರ ರೀತಿನೀತಿಗಳನ್ನು ತನ್ನಲ್ಲಿ ಹೀರಿಕೊಳ್ಳಲು ಅವಕಾಶವಾಯಿತು. ಗಾಂಧಾರ ಶೈಲಿಯ ಕಲೆ ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ಕಲೆಗಳ ಸಂಮಿಶ್ರ ಎಂದು ಹೇಳಲಾಗಿದೆ. ಬಿ.ಎನ್. ಲೂನಿಯಾರವರು ಹೇಳುವಂತೆ ಗಾಂಧಾರ ಕಲೆಯು ನಿಸ್ಸಂಶಯವಾಗಿ ಗ್ರೀಕ್ ಮತ್ತು ರೋಮನ್ನರ ಕಲೆಯಿಂದ ಮೂರ್ತ ಸ್ವರೂಪವನ್ನು ಪಡೆದುಕೊಂಡಿದೆ. ಗ್ರೀಕರಿಂದ ತಾಂತ್ರಿಕತೆಯನ್ನು ಎರವಲು ಪಡೆದುಕೊಂಡ ಈ ಕಲೆ ಭಾವಗಳಲ್ಲಿ ಸಂಪೂರ್ಣವಾಗಿ ಭಾರತೀಯ ಕಲೆಯೇ ಆಗಿದೆ. ಗ್ರೀಕರ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಬೌದ್ಧ ಧರ್ಮಿಯರಾದ ಕುಶಲ ಕರ್ಮಿಗಳು ಈ ಕಲೆಯನ್ನು ಕೆತ್ತಿದರು. ಬೌದ್ಧ ಧರ್ಮದ ಕುಶಲಕರ್ಮಿಗಳು ತಮ್ಮ ಭಾವನೆಗಳನ್ನು ಈ ಶಿಲ್ಪಗಳಲ್ಲಿ ಹೊರ ಹೊಮ್ಮಿಸಿದರು. ಗಾಂಧಾರ ಕಲೆಗಾರನ ಕೈಗಳು ಗ್ರೀಕರ ಕೈಚಳಕವನ್ನು ಹೊಂದಿದ್ದು, ಹೃದಯ ಮಾತ್ರ ಭಾರತೀಯನಾಗಿತ್ತು.

ಸಾಮಾನ್ಯವಾಗಿ ಗಾಂಧಾರ ಶೈಲಿಯ ಮೂರ್ತಿಶಿಲ್ಪಗಳು ಬುದ್ಧನ ವಿಗ್ರಹಗಳನ್ನು ಬೌದ್ಧ ಸಾಹಿತ್ಯದಲ್ಲಿ ಕಂಡುಬರುವ ಅವನ ಜೀವನವನ್ನು ಕುರಿತಾದ ಚಿತ್ರ ಪಟ್ಟಿಕೆಗಳನ್ನು ಬಿಂಬಿಸುತ್ತವೆ. ಬುದ್ಧನ ಮೂರ್ತಿಗಳನ್ನು ಶಿಲೆಗಳ ಮೇಲೆ, ಟೆರ್ರಾಕೋಟ, ಮಣ್ಣು ಮುಂತಾದವುಗಳಲ್ಲಿ ತಯಾರಿಸಿ, ಬಂಗಾರದ ಬಣ್ಣವನ್ನು ಅದಕ್ಕೆ ಹಚ್ಚಲಾಗುತ್ತಿತ್ತು. ಲಾಹೋರ್ ಮತ್ತು ಪೆಶಾವರ್‌ಗಳಲ್ಲಿನ ಮ್ಯೂಸಿಯಂಗಳಲ್ಲಿ ಗಾಂಧಾರ ಶೈಲಿಯ ಕೆಲವು ಮೂರ್ತಿಗಳನ್ನು ಸಂರಕ್ಷಿಸಿ ಇಡಲಾಗಿದೆ. ಟೆರ್ರಾಕೋಟ ಹಾಗೂ ಮಣ್ಣಿನ ವಿಗ್ರಹಗಳು ಮತ್ತು ಗಾರೆಯಲ್ಲಿ ಮಾಡಿದ ವಿಗ್ರಹಗಳು ತಕ್ಷಶಿಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ.

### 52.6.2 *ಗಾಂಧಾರ ಕಲೆಯ ಲಕ್ಷಣಗಳು*

ಗಾಂಧಾರ ಶೈಲಿಯ ಮೂರ್ತಿಶಿಲ್ಪಗಳಲ್ಲಿ ಗಣನೀಯವಾದ ತಾಂತ್ರಿಕ ಲಕ್ಷಣಗಳನ್ನು ಕಾಣಬಹುದು.

ಗಾಂಧಾರ ಶೈಲಿಯ ಮೂರ್ತಿಗಳಲ್ಲಿ ಮಾನವ ಶರೀರದ ಉಬ್ಬು ತಗ್ಗುಗಳು, ಸ್ವಲ್ಪ ಹೆಚ್ಚೆನಿಸುವ ಮೀಸೆ ಪ್ರಧಾನವಾಗಿ ಬಿಂಬಿತವಾಗಿರುವುದನ್ನು ಕಾಣಬಹುದು.

ಗಾಂಧಾರ ಶೈಲಿಯ ಮೂರ್ತಿಗಳಿಗೆ ದಪ್ಪನಾದ ವಸ್ತ್ರಗಳನ್ನು ಉಟ್ಟಿರುವಂತೆ ಕೆತ್ತಲಾಗಿದೆ. ಅಲ್ಲದೆ ಅನೇಕ ಹೊದಿಕೆಗಳ ವಸ್ತ್ರಗಳನ್ನು ಅತಿ ಸೂಕ್ಷ್ಮವಾಗಿ ಕೆತ್ತಿರುವುದು ಭಾರತೀಯ ಮೂರ್ತಿಶಿಲ್ಪಕ್ಕಿಂತ ಬೇರೆಯಾಗಿ ಕಂಡು ಬರುತ್ತದೆ. ಅಲ್ಲದೆ, ಈ ಮೂರ್ತಿಗಳಲ್ಲಿ ಹೆಚ್ಚಿನ ಕೆತ್ತನೆ ಕೆಲಸಗಳನ್ನು ಹಾಗೂ ಅಪಾರವಾದ ಆಭರಣಗಳನ್ನು ಧರಿಸಿರುವಂತೆ ಕೆತ್ತಿರುವುದು ಈ ಕಲೆಯ ಮತ್ತೊಂದು ವೈಶಿಷ್ಟ್ಯ.

### 52.6.3 *ಗಾಂಧಾರ ಕಲೆಯ ವಸ್ತು ವಿಷಯ*

ಗಾಂಧಾರ ಕಲೆಯ ಪ್ರಮುಖ ವಸ್ತು ಅಥವಾ ವಿಷಯ ಬೌದ್ಧ ಧರ್ಮದ ಹೊಸ ಆಯಾಮವಾದ ಮಹಾಯಾನ ಪಂಥವಾಗಿದೆ. ಇದರಲ್ಲಿ ಮುಖ್ಯವಾಗಿ ಬುದ್ಧನ ವಿಗ್ರಹಗಳನ್ನು ಕೆತ್ತುವುದರ ವಿಕಾಸವನ್ನು ಕಾಣಬಹುದು. ವಿಗ್ರಹಾರಾಧನೆಯಲ್ಲಿ ಈ ಕಲೆ ತ್ವರಿತವಾಗಿ ಅಭಿವೃದ್ಧಿಯನ್ನು ಸಾಧಿಸಿತು. ಬುದ್ಧನ ಜೀವನ ಕಥಾನಕಗಳನ್ನು ಆಧರಿಸಿ ತಯಾರಿಸಿದ ಬುದ್ಧನ ವಿಗ್ರಹಗಳು, ಪಟ್ಟಿಕೆಗಳು ನೋಡುವವರ ಕಣ್ಣು ಮತ್ತು ಮನಸ್ಸನ್ನು ಆಕರ್ಷಕಗೊಳಿಸುತ್ತಿದ್ದವು. ಬೌದ್ಧ ಧರ್ಮೀಯರು ಬುದ್ಧನ ವಿಗ್ರಹಗಳಿಗೆ ಮಾರುಹೋಗಿ ಅವುಗಳಿಂದ ಆಕರ್ಷಿತರಾದರು. ನಿಜವಾಗಿ ಹೇಳುವುದಾದರೆ, ಗಾಂಧಾರ ಶೈಲಿಯ ಮೂರ್ತಿಶಿಲ್ಪವು ಬುದ್ಧನ ಜೀವನದ ಹಾಗೂ ಆತನ ಸತ್ಕರ್ಮಗಳ ಸಜೀವ ನಿದರ್ಶನವಾಗಿವೆ.

### 52.6.4 *ಮಥುರಾ ಶೈಲಿ*

ಗಾಂಧಾರವಷ್ಟೇ ಅಲ್ಲದೆ, ಮಥುರಾ ಕೂಡ ಕಾನಿಷ್ಕನ ಕಾಲದಲ್ಲಿ ಒಂದು ಪ್ರಸಿದ್ಧ ಕಲಾ ಕ್ಷೇತ್ರವಾಗಿತ್ತು. ಗಾಂಧಾರ ಶೈಲಿಯನ್ನೇ ಹೆಚ್ಚು ಹೋಲುತ್ತಿದ್ದು ಕೆಲವು ಪ್ರತ್ಯೇಕ ಗುಣಲಕ್ಷಣಗಳನ್ನು ಮಥುರಾ ಶೈಲಿಯ ಮೂರ್ತಿಶಿಲ್ಪವು ಹೊಂದಿತ್ತು. ಕಲೆಗಾರರು ಮಥುರಾ ಶೈಲಿಯ ಮೂರ್ತಿಗಳಿಗೆ ಗುರುತುಗಳಿರುವ ಕೆಂಪು ಶಿಲೆಯನ್ನು ಉಪಯೋಗಿಸಿದ್ದಾರೆ. ಇಲ್ಲಿ ಬುದ್ಧನನ್ನು ಮಾನವನನ್ನಾಗಿ ತೋರಿಸಿರುವುದನ್ನು ಕಾಣಬಹುದು. ಗಾಂಧಾರ ಶಿಲ್ಪವು ಬುದ್ಧನನ್ನು ದೇವ ಹಾಗೂ ದೇವಾದಿದೇವನಾಗಿ ಪ್ರತಿಬಂಬಿಸಿದರೆ ಮಥುರಾ ಶಿಲ್ಪಗಳು ಬುದ್ಧನನ್ನು ಮಾನವನನ್ನಾಗಿ ಪ್ರತಿಬಿಂಬಿಸುತ್ತವೆ. ಮಥುರಾ ಶಿಲ್ಪಗಳು ಬುದ್ಧನ ಮುಖದಲ್ಲಿ ಆಳವಾದ ಪಾರಮಾರ್ಥಿಕತೆಯನ್ನು ಹೊರಹೊಮ್ಮಿಸುತ್ತವೆ. ಗಾಂಧಾರ ಮತ್ತು ಮಥುರಾ ಶಿಲ್ಪಗಳು ಒಂದೇ ಕಾಲದಲ್ಲಿ ಹುಟ್ಟಿದರೂ ಎರಡೂ ಶಿಲ್ಪಗಳೂ ಸ್ವತಂತ್ರವಾಗಿದ್ದು ನಿಚ್ಚಳವಾದ ವಿವಿಧತೆಯನ್ನು ಹೊಂದಿವೆ. ಗಾಂಧಾರ ಶಿಲ್ಪಗಳು ಭೌತಿಕ ಶರೀರ ಹಾಗೂ ಲಕ್ಷಣಗಳಿಗೆ ಒತ್ತು ಕೊಟ್ಟಿದೆ. ಮಥುರಾ ಶೈಲಿಯು ಬುದ್ಧನ ಮುಖದಲ್ಲಿ ಗಂಭೀರ, ಘನತೆ, ಪಾರಮಾರ್ಥಿಕ ಭಾವನೆಗಳನ್ನು ಸ್ಫುಟಿಸುತ್ತದೆ. ಗಾಂಧಾರ ಶಿಲ್ಪವು ಬುದ್ಧನನ್ನು ಯಥಾವತ್ತಾಗಿ ನೈಜವಾಗಿ ಚಿತ್ರಿಸಿದರೆ, ಮಥುರಾ ಶೈಲಿಯು ಬುದ್ಧನನ್ನು ಆದರ್ಶ ವ್ಯಕ್ತಿಯನ್ನಾಗಿ ಚಿತ್ರಿಸಿದೆ. ಇದರಿಂದ ಭಾರತೀಯ ಶೈಲಿಗೂ, ಪಾಶ್ಚಿಮಾತ್ಯ ಶೈಲಿಗೂ ಇರುವ ಪ್ರಮುಖ ವ್ಯತ್ಯಾಸವನ್ನು ಕಾಣಬಹುದು.

ಕುಶಾನರ ಕಾಲದ ಮತ್ತೊಂದು ಕಲೆಯೆಂದರೆ ಕುಶಾನ ದೊರೆಗಳ ಭಾವಚಿತ್ರಗಳು. ಕಾನಿಷ್ಕನ ರುಂಡವಿಲ್ಲದ ವಿಗ್ರಹ ಈ ಕಾಲದ ಬಹಳ ಮುಖ್ಯವಾದ ಅವಶೇಷ. ಕುಶಾನರ ಕಾಲದ ಟೆರ್ರಾಕೋಟ ಶಿಲ್ಪಗಳು ವಿವಿಧ ನಮೂನೆಯ ಹೆಂಗಸರ ಅಲಂಕಾರವನ್ನು ಪ್ರತಿಬಿಂಬಿಸುತ್ತವೆ. ಸಂಗೀತಗಾರರು ಅನೇಕ ತರಹದ ವಾದ್ಯಗಳನ್ನು ಹಿಡಿದಿರುವುದು, ಕುದುರೆ ಸವಾರರು ಲಗಾಮನ್ನು ಹಿಡಿದಿರುವುದು ಇಂತಹ ಚಿತ್ರಗಳನ್ನು ಮೊಟ್ಟ ಮೊದಲ ಬಾರಿಗೆ ಈ ಕಾಲದ ಶಿಲ್ಪಗಳಲ್ಲಿ ಕಾಣಬಹುದು.

### 52.6.5 *ಅಮರಾವತಿ ಶೈಲಿ*

ಗಾಂಧಾರ ಮತ್ತು ಮಥುರಾ ಕಲಾ ಕೇಂದ್ರಗಳು ಉತ್ತರ ಭಾರತದಲ್ಲಿವೆ. ದಕ್ಷಿಣ ಭಾರತದಲ್ಲಿ ಅಮರಾವತಿ ಈ ಕಾಲದ ಪ್ರಸಿದ್ಧ ಕಲಾಕ್ಷೇತ್ರವಾಗಿತ್ತು. ಸುಂದರವಾದ ಬೌದ್ಧ ಗುಹೆಗಳನ್ನು ಬಂಡೆಗಳಲ್ಲಿ ಮಹಾರಾಷ್ಟ್ರದಲ್ಲಿ ಕೆತ್ತಿಸಿರುವುದನ್ನು ಕಾಣಬಹುದು. ಆಂಧ್ರಪ್ರದೇಶದ ಅಮರಾವತಿ ಮತ್ತು ನಾಗಾರ್ಜುನಕೊಂಡ ಪ್ರಮುಖವಾದ ಬೌದ್ಧ ಕಲಾ ಕೇಂದ್ರಗಳಾಗಿದ್ದವು. ಹಲವಾರು ಪಟ್ಟಿಕೆಗಳಲ್ಲಿ ಬುದ್ಧನ ಜೀವನ ಚರಿತ್ರೆಗೆ ಸಂಬಂಧಿಸಿದ ಕಥೆಗಳನ್ನು ಕೆತ್ತಿರುವುದನ್ನು ಅಮರಾವತಿಯಲ್ಲಿ ಕಾಣಬಹುದು. ಸರಳತೆ ಮತ್ತು ಸಂಯಮ ಈ ಶೈಲಿಯ ವಿಗ್ರಹಗಳ ಪ್ರಮುಖ ಲಕ್ಷಣಗಳು. ಭಾರತೀಯ ಕಲಾ ಇತಿಹಾಸದಲ್ಲಿ ಈ ಶೈಲಿಗಳು ಪ್ರತ್ಯೇಕವಾದ ಸ್ಥಾನಗಳನ್ನು ಪಡೆದಿವೆ.

## 52.7 ಕುಶಾನರ ವಾಸ್ತುಶಿಲ್ಪ

ಕುಶಾನರ ಕಾಲ ವಾಸ್ತುಶಿಲ್ಪದಲ್ಲಿ ಮೂರ್ತಿಶಿಲ್ಪದಷ್ಟು ಶ್ರೀಮಂತವಾಗಿರಲಿಲ್ಲ. ಕಾನಿಷ್ಕನ ಕಾಲದಲ್ಲಿ ನಿರ್ಮಿಸಲಾದ ಕೆಲವು ದೇವಾಲಯಗಳು ಮತ್ತು ಬೌದ್ಧ ಮಠಗಳನ್ನು ಸ್ಮರಿಸಬಹುದಾಗಿದೆ. ಕಾನಿಷ್ಕನ ರಾಜಧಾನಿಯಾಗಿದ್ದ ಪೇಷಾವರನ್ನು ಸುಂದರವಾದ ಕಟ್ಟಡಗಳಿಂದ, ಬೌದ್ಧ ಮಠಗಳಿಂದ ಸಿಂಗರಿಸಲ್ಪಟ್ಟಿದ್ದಿತು. ಕಾನಿಷ್ಕನು ತನ್ನ ರಾಜಧಾನಿಯಲ್ಲಿ ನಿಲ್ಲಿಸಿದ ಸ್ಮಾರಕ ಸ್ತಂಭ ಪ್ರಪಂಚದ ಅದ್ಭುತಗಳಲ್ಲಿ ಒಂದಾಗಿದೆ. ಈ ಸ್ಮಾರಕದ ಬಗ್ಗೆ ಚೀನೀ ಯಾತ್ರಿಕ ಫಾಹಿಯಾನನು ವಿವರಿಸಿದ್ದಾನೆ. ಈ ಸ್ಮಾರಕದ ತಳಹದಿ ಐದು ಹಂತಗಳಿಂದ ಕೂಡಿದ್ದು, 13 ಅಂತಸ್ತುಗಳುಳ್ಳ ಸ್ತಂಭವಾಗಿದೆ. ಈ ಸ್ತಂಭವು 631 ಅಡಿ ಎತ್ತರವಿದ್ದು ತಾಮ್ರದ ಛತ್ರಿಗಳಿಂದ ಕೂಡಿದ ಕಬ್ಬಿಣದ ಕಾಲಮ್‌ಗಳನ್ನು ಹೊಂದಿದೆ. ಫಾಹಿಯಾನನು ಈ ಸ್ತಂಭದ ಸುಂದರತೆಯನ್ನು ಯಾವ ಸ್ಮಾರಕಗಳಿಗೂ ಹೋಲಿಸಲಾಗುವುದಿಲ್ಲವೆಂದೂ, ಜಂಬೂದ್ವೀಪದಲ್ಲೇ ಅತ್ಯಂತ ಎತ್ತರವಾದ ಸ್ತಂಭವಿದೆಂದು ವರ್ಣಿಸಿದ್ದಾನೆ.

## 52.8 ಕುಶಾನರ ನಾಣ್ಯಗಳು

ಕುಶಾನ ದೊರೆಗಳು ಹೆಚ್ಚಿನ ಸಂಖ್ಯೆಯಲ್ಲಿ ಚಿನ್ನ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಈ ನಾಣ್ಯಗಳು ಕುಶಾನರ ಕಾಲವನ್ನು ತಿಳಿಯಲು ಹಾಗೂ ಅವರ ಧಾರ್ಮಿಕ ನಂಬಿಕೆಗಳನ್ನು ತಿಳಿಯಲು ಸಹಕಾರಿಯಾಗಿವೆ. ಎರಡನೆಯ ಕಾಡ್‌ಫಿಸಿಸ್‌ನ ನಾಣ್ಯಗಳು ಆತನು ಶಿವಭಕ್ತನೆಂದು ತಿಳಿಸುತ್ತವೆ. ಕಾನಿಷ್ಕನ ನಾಣ್ಯಗಳಲ್ಲಿ ಹಲವಾರು ಹಿಂದೂ ದೇವತೆಗಳ ಚಿತ್ರಗಳನ್ನು ಕೆತ್ತಲಾಗಿದೆ. ಇದರಿಂದ ಕಾನಿಷ್ಕನು ಬೌದ್ಧ ಮತಾವಲಂಬಿಯಾಗಿದ್ದೂ, ಅವನ ಸಾಮ್ರಾಜ್ಯದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಹಿಂದೂ ಧರ್ಮದ ಆರಾಧಕರಿದ್ದರು ಎಂಬುದು ಬೆಳಕಿಗೆ ಬರುತ್ತದೆ. ಅಲ್ಲದೆ, ಅದಕ್ಕೂ ಮಿಗಿಲಾಗಿ, ಕಾನಿಷ್ಕನು ಧಾರ್ಮಿಕ ಸಹಿಷ್ಣುತೆಗೆ ಉತ್ತಮ ಉದಾಹರಣೆಯಾಗಿದ್ದನೆಂಬುದು ಈ ನಾಣ್ಯಗಳಿಂದ ವೇದ್ಯವಾಗುತ್ತದೆ. ಕುಶಾನರ ನಾಣ್ಯಗಳು ಉತ್ತಮ ನಮೂನೆಯನ್ನು ಹೊಂದಿದ್ದ ಸುಧಾರಿತ ಮಾದರಿಯ ನಾಣ್ಯಗಳಾಗಿದ್ದವು. ಕುಶಾನರ ನಾಣ್ಯಗಳಲ್ಲಿ ಕುಶಾನ ದೊರೆಗಳು ಧರಿಸಿದ್ದ ರಾಜಾಧಿರಾಜ, ಮಹೇಶ್ವರ, ಮಹಾರಾಜ ಎಂಬ ಬಿರುದುಗಳು ಕಂಡು ಬರುತ್ತವೆ. ಇದರಿಂದ ರಾಜಕೀಯ ಇತಿಹಾಸದಲ್ಲಿ ಅವರ ಅಂತಸ್ತು, ಘನತೆಗಳು ತಿಳಿದು ಬರುತ್ತವೆ. ಎರಡನೆಯ ಕಾಡ್‌ಫಿಸಿಸ್ಸನ ಚಿನ್ನದ ನಾಣ್ಯಗಳನ್ನು ಆ ವಂಶದವರು ಮಾತ್ರವಲ್ಲದೆ, ಗುಪ್ತ ದೊರೆಗಳೂ ಕೂಡ ಮುಂದುವರಿಸಿದರು.

## 52.9 ಘಟಕದ ಸಾರಾಂಶ

ಈ ಘಟಕದ ಸಾರಾಂಶವನ್ನು ಹೇಳುವುದಾದರೆ, ಉತ್ತರ ಭಾರತದ ಸಾಮ್ರಾಜ್ಯ ಸ್ಥಾಪಕರಲ್ಲಿ ಕುಶಾನರು ಎರಡನೆಯವರು. ಕುಶಾನರು, ಮೌರ್ಯ ಮತ್ತು ಗುಪ್ತರಂತೆ ರಾಜಕೀಯವಾಗಿ ಅಷ್ಟೇನೂ ದೊಡ್ಡ ಸಾಮ್ರಾಜ್ಯವನ್ನು ಕಟ್ಟದಿದ್ದರೂ, ಮೌರ್ಯರ ನಂತರ ಗುಪ್ತರ ಸಾಮ್ರಾಜ್ಯ ಸ್ಥಾಪನೆಯವರೆಗೆ ಉಂಟಾದ ರಾಜಕೀಯ ಶೂನ್ಯವನ್ನು ತುಂಬುವುದರಲ್ಲಿ ಯಶಸ್ವಿಯಾದರು. ಭಾರತದ ಇತಿಹಾಸದಲ್ಲಿ ರಾಜಕೀಯ ಭದ್ರತೆ ಮತ್ತು ದಕ್ಷ ಆಡಳಿತಕ್ಕಿಂತ ಮಿಗಿಲಾಗಿ, ಕುಶಾನರು ಧರ್ಮ ಮತ್ತು ಕಲೆಗಳಿಗೆ ನೀಡಿದ ಪ್ರೋತ್ಸಾಹ ಅಪರಿಮಿತವಾದದ್ದು. ಕುಶಾನರಲ್ಲಿ ಪ್ರಸಿದ್ಧ ರಾಜನಾದ ಕಾನಿಷ್ಕನು ಬೌದ್ಧ ಮತಕ್ಕೆ ನೀಡಿದ ಉತ್ತೇಜನ, ಕಲೆ ಮತ್ತು ಸಾಹಿತ್ಯಗಳಿಗೆ ಕೊಟ್ಟ ಪ್ರೋತ್ಸಾಹ ಅಗಣಿತವಾದದ್ದು. ಈ ಕಾಲದಲ್ಲಿ ಬೌದ್ಧ ಧರ್ಮದಲ್ಲಿ ಹಿಂದೆಂದೂ ಕಾಣದ ಮಹತ್ತರ ಬದಲಾವಣೆಯನ್ನು ಕಂಡಿತು. ಅನ್ಯ ಧರ್ಮಗಳ ಪ್ರಭಾವದಿಂದ ಬೌದ್ಧ ಧರ್ಮವು ಪ್ರಭಾವಿತವಾಗಿ ತನ್ನ ಮೂಲ ತತ್ವಗಳಲ್ಲಿ ನಂಬಿಕೆಯನ್ನು ಕಳೆದುಕೊಂಡು ಹೊಸ ಹೊಸ ಆಚಾರ ವಿಚಾರಗಳು ಆವಿರ್ಭಾವಗೊಂಡವು.

ಪರಿಣಾಮವಾಗಿ ಬೌದ್ಧ ಮತದಲ್ಲಿ ಒಡಕುಂಟಾಗಿ ಎರಡು ಮುಖ್ಯ ಪಂಥಗಳಾಗಿ ಒಡೆದುಹೋದವು. ಅವೇ ಹೀನಯಾನ ಮತ್ತು ಮಹಾಯಾನ. ಮಹಾಯಾನ ಪಂಥವು ತನ್ನ ಸುಧಾರಿಸಿದ ಆಚಾರ ವಿಚಾರಗಳಿಂದ ಬಹು ದೊಡ್ಡ ಧರ್ಮವಾಗಿ ಬೆಳೆಯಿತು. ಹೀನಯಾನ ಪಂಥಕ್ಕೆ ಅಂತಹ ಹೆಚ್ಚಿನ ಪ್ರೋತ್ಸಾಹ ದೊರಕದೆ ಅದು ಕೆಲವರ ಸ್ವತ್ತಾಯಿತು. ಕಾನಿಷ್ಕನು ಒಡಕುಂಟಾದ ಬೌದ್ಧ ಧರ್ಮವನ್ನು ಪೋಷಿಸಿ, ಅದಕ್ಕೆ ಪುನರ್ಜನ್ಮವನ್ನು ನೀಡಿದನು.

ಬೌದ್ಧ ಧರ್ಮದಲ್ಲಿ ಸುಧಾರಣೆಯನ್ನು ತರಲು 4ನೇ ಬೌದ್ಧ ಸಮ್ಮೇಳನವನ್ನು ಸಮಾವೇಶಗೊಳಿಸಿದನು. ಕಾನಿಷ್ಕನು ಬೌದ್ಧ ಮತದ ತತ್ವಗಳನ್ನು ಹರಡಲು ವಿದೇಶಗಳಿಗೂ ಬೌದ್ಧ ಸನ್ಯಾಸಿಗಳನ್ನು ಕಳುಹಿಸಿದನು. ಕಾನಿಷ್ಕನು ಸಂಸ್ಕೃತ ಸಾಹಿತ್ಯಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದರಿಂದ ಉತ್ತಮ ಗುಣಮಟ್ಟದ ಸಂಸ್ಕೃತ ಸಾಹಿತ್ಯ ಸೃಷ್ಟಿಯಾಯಿತು. ಸಂಸ್ಕೃತ ಭಾಷೆ ರಾಜ್ಯ ಭಾಷೆಯಾಗಿ ಪರಿಣಮಿಸಿತು. ಕಾನಿಷ್ಕನು ಭಾರತ ಮತ್ತು ಗ್ರೀಕರ ಕಲೆಗಳ ಸಮ್ಮಿಶ್ರದಿಂದ ಉಂಟಾದ ಗಾಂಧಾರ ಕಲೆಯೆಂಬ ಹೊಸ ಕಲೆಯ ಉದಯಕ್ಕೆ ಕಾರಣನಾದನು. ಅಶೋಕನು ಏನನ್ನು ಸಾಧಿಸದೆ ಉಳಿಸಿದ್ದನೋ ಅದನ್ನು ಕಾನಿಷ್ಕನು ಪೂರ್ಣವಾಗಿ ಸಾಧಿಸಿದನು. ಈ ಕಾರಣಗಳಿಂದ ಕಾನಿಷ್ಕನನ್ನು ಎರಡನೆಯ ಅಶೋಕ ಎಂದು ಕರೆಯಲು ಯೋಗ್ಯನಾಗಿದ್ದಾನೆ.

## 52.10 ಅಭ್ಯಸನೀಯ ಗ್ರಂಥಗಳು


1. Majumdar .R.C. : **Ancient India**
2. Luniya .B.N. : **Evolution of Indian Culture**
3. ಪ್ರೊ. ಜಿ.ಆರ್. ರಂಗಸ್ವಾಮಯ್ಯ : **ಪ್ರಾಚೀನ ಭಾರತ**
4. ವೈ. ಗುರುರಾಜಾರಾವ್ : **ಅರ್ವಾಚೀನ ಭಾರತ**
5. ಪ್ರೊ. ಆರ್. ಜಿ. ಶಿವಣ್ಣ : **ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ಸಮೀಕ್ಷೆ**


## 52.11 ಸ್ವಂತ ಅಭ್ಯಾಸಕ್ಕೆ

1. ಕುಶಾನರ ಕಾಲದ ಬೌದ್ಧ ಧರ್ಮದ ಬೆಳವಣಿಗೆಯನ್ನು ಕುರಿತು ಬರೆಯಿರಿ.
2. ಗಾಂಧಾರ ಕಲೆಯ ಹುಟ್ಟು ಮತ್ತು ಬೆಳವಣಿಗೆಯನ್ನು ನಿರೂಪಿಸಿ.
3. ಕುಶಾನರ ಯುಗ ಭಾರತದ ಇತಿಹಾಸದಲ್ಲಿ ಅವಿಸ್ಮರಣೀಯ ಯುಗ ಈ ಹೇಳಿಕೆಯನ್ನು ಸಮರ್ಥಿಸಿ.


**ಡಾ. ಎಂ. ಸುಶೀಲಾ ಅರಸ್**

ಟಿಪ್ಪಣಿಗಳು

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




**♣ REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✢ **M.Ed Study Centres : 06**



Feedback : improvement, revision and launching of new programmes
Multimedia learning material
STUDENT
Academic and other support
Evaluation - methods and modes
INSTRUCTIONAL SYSTEM